# ನೀರಿನ ದೀಕ್ಷಾಸ್ನಾನ



ಆಶಿಷ್ ರಾಯ್‌ಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2023

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: +91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು ಜೆ.ವಿ(ಬಿಎಸ್ ಐ), ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ.

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books | **ಚರ್ಚ್ ಆಪ್:** apcwo.org/app
**ಸತ್ಯವೇದ ಕಾಲೇಜು:** apcbiblecollege.org | **ಇ-ಕಲಿಕೆ:** apcbiblecollege.org/elearn
**ಸಲಹಾ ಸೇವೆ:** chrysalislife.org | **ಸಂಗೀತ:** apcmusic.org
**ಸೇವಕರುಗಳ ಅನ್ಯೋನ್ಯತೆ:** pamfi.org | **ಎಪಿಸಿ ಪ್ರಪಂಚ ಸೇವೆಗಳು:** apcworldmissions

(Kannada - Water Baptism)

# ನೀರಿನ
# ದೀಕ್ಷಾಸ್ನಾನ

# ವಿಷಯಸೂಚಿ

ಪೀಠಿಕೆ

1. ಮಾನಸಾಂತರದ ಸಂಕೇತ 1

2. ಎಲ್ಲಾ ನೀತಿವಂತಿಕೆಯನ್ನು ಪೂರೈಸುವದು 5

3. ನೀವು ಆತನ ಶಿಷ್ಯರು ಎಂಬುದಕ್ಕೆ ಒಂದು ಸಾಕ್ಷಿ 10

4. ಯೇಸುಕ್ರಿಸ್ತನಲ್ಲಿರುವ ನಿಮ್ಮ ನಂಬಿಕೆಯ ಒಂದು ಸಾಕ್ಷಿ 15

5. ಯೇಸುವಿನೊಂದಿಗೆ ನಿಮ್ಮನ್ನು ಗುರುತಿಸಿಕೊಳ್ಳುವ ಒಂದು ಘೋಷಣೆ 20

6. ಒಂದು ಒಳ್ಳೇ ಮನಸ್ಸಾಕ್ಷಿಯ (ಆತ್ಮಸಾಕ್ಷಿಯ) ಪ್ರತಿಕ್ರಿಯೆ 25

7. ಕೆಲವೊಂದು ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಗಳು 28

# ಪೀಠಿಕೆ

ನೀರಿನ ದೀಕ್ಷಾಸ್ನಾನವು ಯೇಸುಕ್ರಿಸ್ತನ ವಿಶ್ವಾಸಿಗಳಾಗಿ ಪ್ರಯಾಣಿಸುವ ನಮಗೆ ಒಂದು ಪ್ರಾಮುಖ್ಯವಾದ ಅನುಭವವಾಗಿದೆ. ದೀಕ್ಷಾಸ್ನಾನವು, ಯೇಸುಕ್ರಿಸ್ತನಲ್ಲಿ ನಂಬಿಕೆ ಇಡುವುದಕ್ಕೆ ಹಾಗೂ ಆತನನ್ನು ಹಿಂಬಾಲಿಸುವದಕ್ಕೆ ಮುಖ್ಯವಾದ ಹೆಜ್ಜೆ ಇಡುವ ವಿಷಯವಾಗಿ ಒಂದು ಸಂದರ್ಭದಲ್ಲಿ ನಾವು ತೆಗೆದುಕೊಂಡ ಒಂದು ತೀರ್ಮಾನವಾಗಿದೆ. ಆತನನ್ನು ಹಿಂಬಾಲಿಸುವದಕ್ಕೆ ಆಯ್ಕೆ ಮಾಡಿಕೊಂಡ ಪ್ರತಿಯೊಬ್ಬರಿಗೂ ಯೇಸುಕ್ರಿಸ್ತನು ಕೊಟ್ಟ ಒಂದು ಆಜ್ಞೆ ಇದಾಗಿದೆ ಮತ್ತು ಈಗಿನಿಂದ ಅದನ್ನು ಕೈಕೊಳ್ಳಬೇಕಾಗಿದೆ. ನೀವು ದೀಕ್ಷಾಸ್ನಾನಕ್ಕೆ ಸಿದ್ಧರಾಗುವಂತೆ ದೇವರ ವಾಕ್ಯದ ಮೂಲಕ ನೀರಿನ ದೀಕ್ಷಾಸ್ನಾನವನ್ನು ಸೂಚಿಸುವ ಹಾಗೂ ಅದರ ಅರ್ಥವನ್ನು ತಿಳಿದುಕೊಳ್ಳುವದಕ್ಕೆ ಸಹಾಯವಾಗುವಂತೆ ಇದು ಒಂದು ಸರಳವಾದ ಅಧ್ಯಯನವಾಗಿದೆ.

ನೀರಿನ ದೀಕ್ಷಾಸ್ನಾನದ ವಿಷಯವಾದ ಕಾರ್ಯ ವಿಶೇಷತೆಯ ಕುರಿತಾದ ಆರು ಸತ್ಯಾಂಶಗಳನ್ನು ನಾವು ಇಲ್ಲಿ ವಿವರಿಸಿದ್ದೇವೆ:

1) ಮಾನಸಾಂತರದ ಒಂದು ಗುರುತು

2) ಸಕಲ ನೀತಿವಂತಿಕೆಯನ್ನು ನೆರವೇರಿಸುವುದು

3) ನೀವು ಆತನ ಶಿಷ್ಯರೆಂಬುದಕ್ಕೆ ಒಂದು ಸಾಕ್ಷಿ

4) ಯೇಸುಕ್ರಿಸ್ತನಲ್ಲಿರುವ ನಿಮ್ಮ ನಂಬಿಕೆಯ ಒಂದು ಸಾಕ್ಷಿ

5) ಯೇಸುವಿನೊಂದಿಗೆ ನಿಮ್ಮನ್ನು ಗುರುತಿಸಿಕೊಳ್ಳುವ ಒಂದು ಘೋಷಣೆ

6) ಒಂದು ಒಳ್ಳೇ ಆತ್ಮಸಾಕ್ಷಿಯ ಪ್ರತಿಕ್ರಿಯೆ

ದೀಕ್ಷಾಸ್ನಾನಕ್ಕೆ ಸಂಬಂಧಿಸಿದಂತೆ ಜನರು ಸಾಧಾರಣವಾಗಿ ಕೇಳಬಹುದಾದ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಸಹ ನಾವು ನೀಡಿದ್ದೇವೆ.

ದೇವರು ಆಶೀರ್ವದಿಸಲಿ !
ಆಶಿಷ್ ರಾಯ್‌ಚೂರ್

# 1
# ಮಾನಸಾಂತರದ ಸಂಕೇತ

ಹೊಸ ಒಡಂಬಡಿಕೆಯಲ್ಲಿ ನೀರಿನ ದೀಕ್ಷಾಸ್ನಾನದ ಕುರಿತಾಗಿ ಸಾರಿ ಹೇಳುತ್ತಾ, ಜನರಿಗೆ ದೀಕ್ಷಾಸ್ನಾನ ಮಾಡಿಸುವವರಲ್ಲಿ ಸ್ನಾನಿಕನಾದ ಯೋಹಾನನೇ ಮೊದಲ ವ್ಯಕ್ತಿಯಾಗಿದ್ದನು. ಇವನು ಯೇಸುವಿನ ಸೇವೆಗಾಗಿ ಜನರನ್ನು ಸಿದ್ಧಮಾಡುವದಕ್ಕೂ, ಯೇಸುಕ್ರಿಸ್ತನನ್ನು ಲೋಕಕ್ಕೆ ಪರಿಚಯಿಸುವದಕ್ಕೂ ನೇಮಿಸಲ್ಪಟ್ಟಂತಹ ಮುಂದೂತನಾಗಿ ಬಂದವನಾಗಿದ್ದನು.

**ಮಾರ್ಕ 1:4,5**

**4 ಯೋಹಾನನು ಬಂದು ಜನರಿಗೆ–ನೀವು ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿ ಹೇಳುತ್ತಾ ಅಡವಿಯಲ್ಲಿ** (ಗ್ರೀಕ್ ಬ್ಯಾಪ್ಟಿಜೊ) **ದೀಕ್ಷಾಸ್ನಾನ ಮಾಡಿಸುತ್ತಾ ಇದ್ದನು.**

**5 ಆಗ ಯೂದಾಯ ಸೀಮೆಯೆಲ್ಲವೂ ಯೆರೂಸಲೇಮಿನವರೆಲ್ಲರೂ ಅವನ ಬಳಿಗೆ ಹೊರಟುಹೋಗಿ ತಮ್ಮ ತಮ್ಮ ಪಾಪಗಳನ್ನು ಹೇಳಿಕೊಂಡು ಯೊರ್ದನ್ ಹೊಳೆಯಲ್ಲಿ ಅವನಿಂದ** (ಗ್ರೀಕ್ ಬ್ಯಾಪ್ಟಿಸ್ಮ) **ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು.**

ಯೋಹಾನನ ದೀಕ್ಷಾಸ್ನಾನವು ಮಾನಸಾಂತರದ ದೀಕ್ಷಾಸ್ನಾನವಾಗಿತ್ತು. ಅಂದರೆ ಮಾನಸಾಂತರ ಪಟ್ಟವರೆಲ್ಲರೂ ಯೋಹಾನನಿಂದ ದೀಕ್ಷಾಸ್ನಾನ ಹೊಂದುತ್ತಿದ್ದರು.

''ಮಾನಸಾಂತರ ಪಡು'' ಮತ್ತು ''ಮನತಿರುಗು'' ಎಂಬ ಪದಗಳು ಗ್ರೀಕ್‌ನ 'ಮೆಟನೋಯ' ಎಂಬ ಪದದಿಂದ ಬಂದಿದೆ ಅಂದರೆ ಮನಸ್ಸು ಅಥವಾ ಉದ್ದೇಶ ಬದಲಾಯಿಸುವಿಕೆ ಎಂದರ್ಥ ಮತ್ತು ಉತ್ತಮವಾಗುವದಕ್ಕಾಗಿ ಒಂದು ಬದಲಾವಣೆಯನ್ನು ಒಳಗೊಂಡಿರುತ್ತದೆ. ಹೊಸ ಒಡಂಬಡಿಕೆಯಲ್ಲಿ ಮಾನಸಾಂತರವೆಂದರೆ, ನಮ್ಮದೇ ಆದಂತಹ ಪಾಪಗಳಿಂದ ಹಾಗೂ ಅದರ ಮಾರ್ಗಗಳಿಂದ ಮನಸ್ಸನ್ನು ಮತ್ತು ಉದ್ದೇಶಗಳನ್ನು ಬದಲಾಯಿಸಿಕೊಂಡು ದೇವರ ಕಡೆಗೆ ತಿರುಗಿಕೊಂಡು ಆತನ ಮಾರ್ಗಗಳನ್ನು ಅಳವಡಿಸಿಕೊಳ್ಳುವುದೇ ಆಗಿದೆ.

ಮಾನಸಾಂತರ ಹೊಂದುವದು ಯೋಹಾನನಿಂದಲೇ ಮೊದಲು ಪರಿಚಯಿಸಲ್ಪಟ್ಟಿತು ಮತ್ತು ಬೋಧಿಸಲ್ಪಟ್ಟಿತು ಎಂಬುದು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ:

- ಪಾಪಗಳನ್ನು ಅರಿಕೆ ಮಾಡುವದು (ಮಾರ್ಕ 1:5). ಅಂದರೆ ತಮ್ಮ ತಪ್ಪು ಅಪರಾಧಗಳನ್ನು ಅರಿತುಕೊಂಡು ಅದನ್ನು ದೇವರ ಮುಂದೆ ಒಪ್ಪಿಕೊಳ್ಳುತ್ತಿದ್ದರು.
- ಮಾನಸಾಂತರಕ್ಕೆ ಯೋಗ್ಯವಾದ ತಕ್ಕ ಫಲಗಳನ್ನು ಕೊಡುವದು (ಲೂಕ 3:8) ಅಂದರೆ ಮಾನಸಾಂತರವು, ಅವರ ಜೀವನದ ಒಂದು ಬದಲಾವಣೆಯ ಗುರುತಾಗಿರುವದು (ಲೂಕ 3:11-14).

ಇಲ್ಲಿಂದ ಮೊದಲುಗೊಂಡು, ಮನಸ್ಸಿನಲ್ಲಿ ಬದಲಾವಣೆ (ಯೋಚಿಸುವ ರೀತಿ) ಆ ನಂತರದಲ್ಲಿ ಇದರ ಪರಿಣಾಮವು ಜೀವನದಲ್ಲಿ ಬದಲಾವಣೆಯಾಗುವದಾಗಿತ್ತು (ಜೀವಿಸುವ ರೀತಿ).

''ದೀಕ್ಷಾಸ್ನಾನ'' ಅಥವಾ ''ದೀಕ್ಷಾಸ್ನಾನ'' ಮಾಡಿಸುವದು ಎಂಬ ಪದವು, ಗ್ರೀಕ್ ಪದವಾದ 'ಬ್ಯಾಪ್ಟಿಜೊ' ದಿಂದ ಬಂದಿದೆ, ಅಂದರೆ ಅದ್ದು, ಮುಳುಗಿಸು, ಹೂಳಿಡು, ನೀರಿನಿಂದ ಮುಳುಗಿಸು, ಮುಳುಗಿಸುವುದರ ಮೂಲಕ ಶುದ್ಧ ಮಾಡು ಎಂದರ್ಥ. ದೀಕ್ಷಾಸ್ನಾನ ಅಂದರೆ ದೀಕ್ಷಾಸ್ನಾನ ಮಾಡಿಸುವದು ಎಂಬ ಪದವು 'ಬ್ಯಾಪ್ಟಿಸ್ಮ' ಎಂಬ ಪದದಿಂದ ಬಂದಿದೆ, ಸರಳವಾಗಿ ಅದರರ್ಥ ಮುಳುಗಿಸು, ಹೂಳಿಡು ಎಂಬುದೆ. ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಹೊಂದುವಾಗ ಅವನು ಸಂಪೂರ್ಣವಾಗಿ ನೀರಿನಿಂದ ಮುಚ್ಚಲ್ಪಡುತ್ತಾನೆ. ಈ ಎಲ್ಲಾ ಪದಗಳ ಅರ್ಥವು ಹೊಸ ಒಡಂಬಡಿಕೆಯ ಅನುಸಾರವಾಗಿ ನೀರಿನ ದೀಕ್ಷಾಸ್ನಾನದ ಅನುಕ್ರಮ ಮತ್ತು ಆತ್ಮೀಕ ಸೂಚನೆಗಳನ್ನು ಸ್ಪಷ್ಟ ಪಡಿಸುತ್ತದೆ (ಅದನ್ನು ಕುರಿತು ನಾವು ನಂತರದಲ್ಲಿ ಅಭ್ಯಾಸಿಸುತ್ತೇವೆ). **ಹೊಸ ಒಡಂಬಡಿಕೆಯಲ್ಲಿ ನೀರಿನ ದೀಕ್ಷಾಸ್ನಾನವು ಒಬ್ಬ ವ್ಯಕ್ತಿಯ ಮೇಲೆ ನೀರನ್ನು ಚಿಮುಕಿಸುವುದಲ್ಲ, ಆದರೆ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿಸುವದೇ ಆಗಿದೆ.**

## ಮಾನಸಾಂತರ ಮತ್ತು ನಂಬಿಕೆ

ಮಾನಸಾಂತರದ ಸಂದೇಶವು ದೇವರ ರಾಜ್ಯದ ಸುವಾರ್ತೆಯಲ್ಲಿ ನಂಬಿಕೆಯಿಡುವಂತೆ, ಅದರಲ್ಲಿ ಪ್ರವೇಶಿಸುವದಕ್ಕಾಗಿ ಭೂತಕಾಲ, ವರ್ತಮಾನ ಕಾಲದ ಒಂದು ಆಹ್ವಾನವಾಗಿದೆ.

**ಮಾರ್ಕ 1:14,15**
**14 ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು ಗಲಿಲಾಯ ಸೀಮೆಗೆ ಬಂದು –**
**15 ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ ಎಂದು ದೇವರ ಸುವಾರ್ತೆಯನ್ನು ಸಾರಿ ಹೇಳಿದನು.**

ಅದರಂತೆಯೇ ನಂತರದಲ್ಲಿ ಅಪೊಸ್ತಲನಾದ ಪೌಲನು ಸಹ ಎಫೆಸದ ಸಭೆಯ ಜನರಿಗೆ ವಿವರಿಸಿದ್ದೇನೆಂದರೆ:

**ಅಪೊಸ್ತಲರ ಕೃತ್ಯಗಳು 19:4**
**ಅದಕ್ಕೆ ಪೌಲನು–ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆ ಇಡಬೇಕೆಂಬದಾಗಿ ಜನರಿಗೆ ಹೇಳಿದನು.**

ಮೊದಲು ನಾವು ನಮ್ಮ ಮನಸ್ಸು ಹಾಗೂ ಉದ್ದೇಶ ಬದಲಾವಣೆಯಾಗುವಂತೆ ಮಾನಸಾಂತರ ಹೊಂದಿದೆವು. ನಾವು ಹಿಂಬಾಲಿಸುತ್ತಿದ್ದಂತಹ ಪಾಪದ,ಈ ಲೋಕದ, ಅಂಧಕಾರದ ಮಾರ್ಗಗಳು ಅಥವಾ ನಮ್ಮ ಸ್ವಂತ ಮಾರ್ಗಗಳೆಲ್ಲಾ ನಮಗೆ ಜೀವನವನ್ನುಂಟು ಮಾಡುವದಿಲ್ಲವೆಂತಲೂ, ಅವುಗಳೆಲ್ಲಾ ಶಿಕ್ಷಾಪಾತ್ರ ವಾದವುಗಳೆಂತಲೂ ಅನುಭವಿಸಿ ತಿಳಿದುಕೊಂಡೆವು. ನಾವು ಯೇಸು ಕ್ರಿಸ್ತನಲ್ಲಿ ನಂಬಿಕೆ ಇಡಲು ಆರಿಸಿಕೊಳ್ಳುತ್ತೇವೆ, ಆತನು ನಮಗೆ ಒದಗಿಸುವ ಮೋಕ್ಷದ (ರಕ್ಷಣೆಯ) ಉಚಿತ ಉಡುಗೊರೆಯನ್ನು ಸ್ವೀಕರಿಸಿ ಆತನ ಅದ್ಭುತ ಬೆಳಕಿನ ರಾಜ್ಯವನ್ನು ಪ್ರವೇಶಿಸುತ್ತೇವೆ. ನಾವು ಈಗ ನಮ್ಮ ಚಿಂತನೆಯನ್ನು ಯೇಸು ಕ್ರಿಸ್ತನು ಮತ್ತು ಆತನ ರಾಜ್ಯಕ್ಕೆ ಅನುಗುಣವಾಗಿ ಜೋಡಿಸುತ್ತೇವೆ. ನಾವು ಮಾನಸಾಂತರ ಪಡುತ್ತೇವೆ ಮತ್ತು ನಂಬುತ್ತೇವೆ.

## ಮಾನಸಾಂತರ, ನಂಬಿಕೆ ಮತ್ತು ದೀಕ್ಷಾಸ್ನಾನ ಹೊಂದುವದು

**ಮಾರ್ಕ 16:15,16**
**15 ಆಮೇಲೆ ಅವರಿಗೆ–ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ.**
**16 ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು.**

**ಅಪೊಸ್ತಲರ ಕೃತ್ಯಗಳು 2:38,41**
**38 ಪೇತ್ರನು ಅವರಿಗೆ–ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ;**

**[41] ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು.**

ಒಮ್ಮೆ ನಾವು ಯೇಸು ಕ್ರಿಸ್ತನ ಸುವಾರ್ತೆಯನ್ನು ಕೇಳಿದಾಗ ಪಶ್ಚಾತ್ತಾಪಪಟ್ಟು ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟಿದ್ದೇವೆ ಮತ್ತು ನಾವು ಈಗ ದೀಕ್ಷಾಸ್ನಾನ ಹೊಂದಲು ಸಿದ್ಧರಿದ್ದೇವೆ. ಮಾನಸಾಂತರ ಮತ್ತು ಪಾಪಗಳ ಕ್ಷಮೆ ಮತ್ತು ಆತನು ಒದಗಿಸುವ ರಕ್ಷಣೆಗಾಗಿ ಯೇಸುಕ್ರಿಸ್ತನಲ್ಲಿ ನಂಬಿಕೆ ಇಡುವುದು ನೀರಿನ ದೀಕ್ಷಾಸ್ನಾನಕ್ಕೆ ಪೂರ್ವ ಅವಶ್ಯಕವಾಗಿದೆ.

ನಾವು ಮಾನಸಾಂತರ ಪಟ್ಟು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆ ಇಟ್ಟಾಗ, ಪಾಪ ಮತ್ತು ಅದರ ಪರಿಣಾಮಗಳಿಂದ ರಕ್ಷಿಸಲ್ಪಟ್ಟಿದ್ದೇವೆ. ನರಕದಲ್ಲಿ ದೇವರಿಂದ ಶಾಶ್ವತವಾದ ಬೇರ್ಪಡಿಸುವಿಕೆಯ ಬದಲಾಗಿ ನಾವು ದೇವರ ಮಕ್ಕಳಾಗಿದ್ದೇವೆ, ಶಾಶ್ವತವಾದ ದಿಕ್ಕರಿಸುವಿಕೆಯಿಂದ (ಶಾಪದಿಂದ) ರಕ್ಷಿಸಲ್ಪಟ್ಟಿದ್ದೇವೆ, ರಕ್ಷಣೆಯನ್ನು ಪಡೆದುಕೊಂಡಿದ್ದೇವೆ ಮತ್ತು ಆತನ ರಾಜ್ಯದಲ್ಲಿ ಪಾಲುಗಾರರಾಗಿದ್ದೇವೆ. ನಾವು ಯೇಸುಕ್ರಿಸ್ತನಲ್ಲಿ ನಂಬಿಕೆ ಇಡುವುದರ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದ್ದೇವೆ (ಎಫೆಸದವರಿಗೆ 2:8). ನಿತ್ಯಜೀವವು ದೇವರ ಉಚಿತವಾದ ವರವಾಗಿದೆ (ರೋಮಾಪುರದವರಿಗೆ 6:23). ಇದನ್ನು ನಾವು ಯಾವುದರಿಂದಲೂ ಗಳಿಸಲು ಸಾಧ್ಯವಿಲ್ಲ, ಆದರೆ ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವುದರಿಂದಲೇ ರಕ್ಷಣೆ ಹೊಂದಿದ್ದೇವೆ (ಅಪೊಸ್ತಲರ ಕೃತ್ಯಗಳು 16:31; ರೋಮಾಪುರದವರಿಗೆ 10:13).

ನೀರಿನ ದೀಕ್ಷಾಸ್ನಾನವು ನಮಗೆ ರಕ್ಷಣೆಯ ಅನುಭವವನ್ನುಂಟುಮಾಡುತ್ತದೆ, ಇದು ಮಾನಸಾಂತರ ಪಟ್ಟು ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟು ನಾವು ಪಡೆದ ರಕ್ಷಣೆಯ ಅಭಿವ್ಯಕ್ತಿಯಾಗಿದೆ.

## ಪ್ರತಿಬಿಂಬಿಸುವಿಕೆ

1) ಮಾನಸಾಂತರದ ಅರ್ಥವೇನು?
2) ''ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು'' ಎಂಬ ಪದದ ಅರ್ಥವೇನು?
3) ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಹೊಂದುವ ಮೊದಲು ಆ ವ್ಯಕ್ತಿಯಲ್ಲಿ ಏನಾಗಬೇಕಾಗಿದೆ?
4) ನೀರಿನ ದೀಕ್ಷಾಸ್ನಾನದ ಪೂರ್ವ–ಅವಶ್ಯಕತೆಗಳನ್ನು ನೀವು ಪೂರೈಸಿದ್ದೀರಾ?

# 2
# ಎಲ್ಲಾ ನೀತಿವಂತಿಕೆಯನ್ನು ಪೂರೈಸುವದು

ಸ್ನಾನಿಕನಾದ ಯೋಹಾನನ ನಂತರ ಮನುಷ್ಯನಾಗಿ ಬಂದ ಕರ್ತನಾದ ಯೇಸುಕ್ರಿಸ್ತನು ತಾನು ದೇವರಾಗಿದ್ದಾಗ್ಯೂ, ಆತನು ಮಾನಸಾಂತರದ ದೀಕ್ಷಾಸ್ನಾನದ ಕುರಿತಾಗಿ ಆತನು ಮಾಡಿದ ಪ್ರಚಾರದ ಸೇವೆಯ ವಿಷಯವಾಗಿ ಗಮನಿಸುವದಕ್ಕೆ ಆಸಕ್ತಿ ಉಂಟಾಗುತ್ತದೆ. ಕರ್ತನಾದ ಯೇಸುಕ್ರಿಸ್ತನು ಪಾಪವಿಲ್ಲದವನಾಗಿದ್ದುದರಿಂದ ಆತನಿಗೆ ಮಾನಸಾಂತರದ ಅವಶ್ಯಕತೆ ಇರಲಿಲ್ಲ. ಆತನು ಪರಿಪೂರ್ಣನೂ, ಪಾಪವಿಲ್ಲದವನೂ, ಪ್ರತಿಯೊಂದರಲ್ಲಿಯೂ ತಂದೆಗೆ ವಿಧೇಯನೂ ಆಗಿದ್ದನು. ಆತನೊಬ್ಬನೇ ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿಯಾಗಿದ್ದರೂ ಸಹ ಯಾಕೆ ಯೇಸು ನೀರಿನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡನು?

ಯೇಸು ಯಾಕೆ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡನು ಎಂಬುದಕ್ಕೆ ಎರಡು ಕಾರಣಗಳನ್ನು ದೇವರ ವಾಕ್ಯದಲ್ಲಿ ನೋಡುತ್ತೇವೆ.

## ಆತನೇ ಈತನು

**ಯೋಹಾನ 1:29–34**

**29 ಮರುದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ—ಅಗೋ(ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು.**

**30 ನನ್ನ ಹಿಂದೆ ಬರುವವನು ನನಗಿಂತ ಮೊದಲೇ ಇದ್ದದರಿಂದ ನನಗೆ ಮುಂದಿನವನಾದನು ಎಂದು ನಾನು ಹೇಳಿದ ಮಾತು ಈತನ ವಿಷಯವಾಗಿಯೇ.**

**31 ನನಗೂ ಆತನ ಗುರುತಿರಲಿಲ್ಲ; ಆದರೆ ಆತನನ್ನು ಇಸ್ರಾಯೇಲ್ಯರಿಗೆ ತಿಳಿಯಪಡಿಸುವದಕ್ಕೋಸ್ಕರವೇ ನಾನು ನೀರಿನ ದೀಕ್ಷಾಸ್ನಾನವನ್ನು ಮಾಡಿಸುವವನಾಗಿ ಬಂದೆನು ಅಂದನು.**

**32 ಇದಲ್ಲದೆ ಯೋಹಾನನು ಸಾಕ್ಷಿ ಕೊಟ್ಟು ಹೇಳಿದ್ದೇನೆಂದರೆ—ದೇವರಾತ್ಮವು ಪಾರಿವಾಳದಂತೆ ಆಕಾಶದಿಂದ ಇಳಿಯುವದನ್ನು ನೋಡಿದೆನು. ಅದು ಆತನ ಮೇಲೆ ನೆಲೆಗೊಂಡಿತು.**

**[33] ನನಗೂ ಆತನ ಗುರುತಿರಲಿಲ್ಲ; ಆದರೆ ನೀರಿನ ಸ್ನಾನವನ್ನು ಮಾಡಿಸುವದಕ್ಕೆ ನನ್ನನ್ನು ಕಳುಹಿಸಿದಾತನು–ಯಾವನ ಮೇಲೆ ಆತ್ಮವು ಇಳಿದು ಬಂದು ಇರುವದನ್ನು ನೀನು ನೋಡುವಿಯೋ ಆತನೇ ಪವಿತ್ರಾತ್ಮದ ಸ್ನಾನವನ್ನು ಕೊಡುವವನು ಎಂದು ತಾನೇ ನನಗೆ ಹೇಳಿದನು.**
**[34] ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ ಅಂದನು.**

ಲೋಕ ರಕ್ಷಕನಾದ ಮೆಸ್ಸೀಯನನ್ನು ಮಾನಸಾಂತರದ ಗುರುತಾಗಿ ಸೂಚಿಸುವದಕ್ಕಾಗಿಯೇ ಸ್ನಾನಿಕನಾದ ಯೋಹಾನನು ಕಳುಹಿಸಲ್ಪಟ್ಟವನಾಗಿದ್ದನು. ಇದಲ್ಲದೆ ದೇವರು, ಯೋಹಾನನಿಗೆ ನೀರಿನ ದೀಕ್ಷಾಸ್ನಾನ ಕೊಡುವದಕ್ಕೂ, ಈ ದೇವರ ಕುರಿಮರಿಯನ್ನು ಲೋಕಕ್ಕೆ ಮತ್ತು ಇಸ್ರಾಯೇಲ್ಯರೆಲ್ಲರಿಗೂ ಪ್ರಕಟಿಸುವದಕ್ಕಾಗಿ ಪ್ರೇರೇಪಿಸಿದ್ದನು. ಯೇಸು ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಾಗ ದೇವರ ಆತ್ಮ ವು ಆತನ ಮೇಲೆ ಇಳಿಯುವುದು ಸ್ನಾನಿಕನಾದ ಯೋಹಾನನಿಗೆ ''ಆತನೇ ಈತನು'' ಎಂಬುದಕ್ಕೆ ಗುರುತಾಗಿದ್ದಿತು. ಯೇಸು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಕ್ಕೆ ಇದೇ ಮೊದಲ ಕಾರಣ ಹಾಗೂ ಆತನನ್ನು ದೇವರ ಮಗನೆಂದು ಪ್ರಕಟಿಸುವದಕ್ಕೆ ತಂದೆಯಾದ ದೇವರು ಕೊಟ್ಟ ಗುರುತಾಗಿತ್ತು. ಇದು ಯೋಹಾನನ ದೃಷ್ಟಿಕೋನವಾಗಿತ್ತು

ಯೇಸು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡದ್ದು ಸಹ ಆಸಕ್ತಿಯಿಂದ ಗಮನಿಸಬಹುದಾದ ಒಂದು ಅಂಶವಾಗಿದೆ. ಯೇಸು ಯೊರ್ದನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡದ್ದರಿಂದ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿದನು ಎಂಬುದು ಸ್ಪಷ್ಟವಾಗುತ್ತದೆ. ಮತ್ತಾಯದಲ್ಲಿ ಬರೆಯಲ್ಪಟ್ಟಿರುವುದನ್ನು ನೋಡಬಹುದಾಗಿದೆ *''ಯೇಸು ಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು''* (ಮತ್ತಾಯ 3:16).

## ಎಲ್ಲಾ ನೀತಿವಂತಿಕೆಯನ್ನು ನೆರವೇರಿಸುವದಕ್ಕಾಗಿ

ಯೋಹಾನನು ಸಾರುತ್ತಿದ್ದ ಸಂದೇಶವು ಮಾನಸಾಂತರದ ದೀಕ್ಷಾಸ್ನಾನವನ್ನು ಕುರಿತದ್ದೂ ಮತ್ತು ತಾನು ಮಾನಸಾಂತರ ಪಡುವದು ಅವಶ್ಯವಿಲ್ಲ ಎಂದು ತಿಳಿದಿದ್ದರೂ ಸಹ ಹೀಗೆ ಮಾಡಲ್ಪಡುವದಕ್ಕಾಗಿ ಯೇಸುವು ಯಾಕೆ ಪ್ರೇರೇಪಿಸಲ್ಪಟ್ಟನು ಎಂಬ ವಿಷಯವನ್ನು ಆತನ ದೃಷ್ಟಿಕೋನದಿಂದ ನೋಡುವುದಕ್ಕೆ ಆಸಕ್ತಿಯನ್ನುಂಟು ಮಾಡುತ್ತದೆ.

ಯೇಸು ಸ್ನಾನಿಕನಾದ ಯೋಹಾನನನ್ನು ಯೊರ್ದನ್ ನದಿಯ ಬಳಿಯಲ್ಲಿ ಸಂಧಿಸಿದಾಗ ಏನಾಯಿತು ಎಂಬುದು ಇಲ್ಲಿದೆ:

**ಮತ್ತಾಯ 3:13-17**
**13 ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೊರ್ದನ್ ಹೊಳೆಗೆ ಬಂದನು.**
**14 ಆಗ ಯೋಹಾನನು—ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು.**
**15 ಆದರೆ ಯೇಸು ಅವನಿಗೆ—ಸದ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು.**
**16 ಯೇಸು ಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು.**
**17 ಆಗ ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು.**

ಯೇಸು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕಾಗಿ ಮುಂದೆ ಬಂದಾಗ ಸ್ನಾನಿಕನಾದ ಯೋಹಾನನಿಗೆ ಒಂದು ಅಸಾಮಾನ್ಯ ಅನುಭವ ಉಂಟಾಯಿತು. ಇದ್ದಕ್ಕಿದ್ದಂತೆ ತನ್ನ ಬಳಿಗೆ ಬರುತ್ತಿದ್ದ ಯೇಸುವನ್ನು ಕಂಡು ''ಇವನೇ ಆತನು'' ಎಂದು ಗುರುತಿಸಿದನು. ಇದು ಅಸಾಧಾರಣ ಸಂಗತಿಯಾಗಿತ್ತು, ಯಾಕೆಂದರೆ ಯೋಹಾನನು ಇನ್ನೂ ಸಹ ಪಾರಿವಾಳದಂತೆ ದೇವರಾತ್ಮನು ಇಳಿಯುವದನ್ನು ಕಂಡಿರಲಿಲ್ಲ, ಗುಡುಗಿನಂತೆ ಬಂದ ಪರಲೋಕದ ವಾಣಿಯನ್ನು ಸಹ ಕೇಳಿಸಿಕೊಂಡಿರಲಿಲ್ಲ ಮತ್ತು ಯೋಹಾನನು ಮಾಡುತ್ತಿದ್ದ ಸೇವೆಗೆ ಸಂಪೂರ್ಣ ಕಾರಣ ಕರ್ತನಾದ ದೇವರ ಕುರಿಮರಿ ಆತನೇ ಎಂದು ಯೋಹಾನನಿಗೆ ಗೊತ್ತಿತ್ತು, ಆದದರಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬೇರೆ ವ್ಯಕ್ತಿ ಇನ್ನು ಬರಬೇಕಾಗಿಲ್ಲ ಎಂದು ಅರಿತುಕೊಂಡನು.

ಯೇಸುವಿಗೆ ದೀಕ್ಷಾಸ್ನಾನ ಮಾಡಿಸಲು ಯೋಹಾನನಿಗೆ ಮನಸ್ಸಿರಲಿಲ್ಲ. ಆದರೆ ಯೇಸುವೇ ಅವನ ಬಳಿಗೆ ಬಂದು ತನಗೆ ದೀಕ್ಷಾಸ್ನಾನ ಮಾಡಿಸಬೇಕೆಂದು ಕೇಳಿಕೊಂಡನು. ತಂದೆಯ ದೃಷ್ಟಿಗೆ ಸರಿಯಾದುದ್ದನ್ನು ಮಾಡುತ್ತಾ, ಆ ಸಂದರ್ಭದಲ್ಲಿ ತಂದೆ ಬಯಸುವದನ್ನೆಲ್ಲಾ ಮಾಡಬೇಕಾಗಿತ್ತು. ಹೀಗೆ ಅವರು ಎಲ್ಲಾ ನೀತಿವಂತಿಕೆಯನ್ನು ನೆರವೇರಿಸಬೇಕಾಗಿತ್ತು.

ಪಾಪದಿಂದ ಪಶ್ಚಾತ್ತಾಪ ಪಟ್ಟು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕಿಂತ ಮತ್ತೊಂದು ''ಬಹು ದೊಡ್ಡ'' ವಿಷಯವು ಇನ್ನೂ ಇದೆ, ಅದೇನೆಂದರೆ, ಸ್ವತ: ದೇವಕುಮಾರನೂ, ದೇವರ ಕುರಿಮರಿಯೂ ಆದಾತನೇ ದೇವರ ಚಿತ್ತವನ್ನು ವಿವರಿಸುವದಕ್ಕಾಗಿ ಈ ಭೂಲೋಕಕ್ಕೆ ಕಾಲಿಡಲು ಇಚ್ಚೆಯುಳ್ಳವನಾದದ್ದೇ. ಹಾಗೆಯೇ ದೀಕ್ಷಾಸ್ನಾನವು ಸಹ, ಯೇಸುವಿನಂತೆಯೇ ದೇವರ ರಾಜ್ಯವು ಈ ಲೋಕಕ್ಕೆ ಬರುವದಕ್ಕಾಗಿ ಹೌದು ಅನ್ನುವದೂ, ಆತನ ಚಿತ್ತವನ್ನು ನೆರವೇರಿಸುವಂತೆ ಹೌದು ಎನ್ನುವದಾಗಿದೆ. ನೀವು ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಎಲ್ಲಾ ನೀತಿವಂತಿಕೆಯನ್ನು ನೆರವೇರಿಸುವವರೂ, ದೇವರ ದೃಷ್ಟಿಗೆ ಸರಿಯಾದದ್ದನ್ನು ಮಾಡುವವರೂ, ನಿಮ್ಮ ಮುಖಾಂತರವಾಗಿ ದೇವರ ರಾಜ್ಯವನ್ನು ಭೂಮಿಗೆ ಇಳಿಯುವಂತೆ ಮಾಡುವವರೂ ಹಾಗೂ ನಿಮ್ಮ ಜೀವನದಲ್ಲಿ ದೇವರ ಚಿತ್ತವು ನೆರವೇರುವದಕ್ಕೆ ''ಹೌದು'' ಎಂದು ಹೇಳುವವರೂ ಆಗಿರುವಿರಿ. ಆತನ ಚಿತ್ತಕ್ಕೆ ವಿಧೇಯರಾಗುವವರೆಲ್ಲರಿಗೂ ದೇವರು ಪ್ರತಿಫಲವನ್ನು ಕೊಡುವವನಾಗಿದ್ದಾನೆ.

ನಿಮ್ಮ ವಿಧೇಯತ್ವವು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದರ ಮೂಲಕ ಪ್ರತಿಫಲವನ್ನು ಹೊಂದುವ ಒಂದು ಸ್ಥಾನವನ್ನು ತಲುಪುವಂತೆ ಮಾಡುತ್ತದೆ. ತನ್ನನ್ನು ಹುಡುಕುವವರಿಗೆ ದೇವರು ಪ್ರತಿಫಲವನ್ನು ಕೊಡುವವನಾಗಿದ್ದಾನೆ (ಇಬ್ರಿಯರಿಗೆ 11:6).

## ದೇವರ ಚಿತ್ತವನ್ನು ನಿರಾಕರಿಸುವದು

ಸ್ನಾನಿಕನಾದ ಯೋಹಾನನು ಮಾನಸಾಂತರದ ದೀಕ್ಷಾಸ್ನಾನದ ಕುರಿತಾದ ಸಂದೇಶವನ್ನು ಸಾರುತ್ತಿದ್ದಾಗ, ಸಾಧಾರಣ ಜನರು ಆತನ ಉಪದೇಶವನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದರು. ಆದರೆ ಧಾರ್ಮಿಕ ನಾಯಕರು, ಮಹಾಯಾಜಕರು, ಫರಿಸಾಯರು, ಶಾಸ್ತ್ರಿಗಳು ಮತ್ತು ಧರ್ಮೋಪದೇಶಕರು ಯೋಹಾನನು ಸಾರುತ್ತಿದ್ದ ಸಂದೇಶವನ್ನು ನಿರಾಕರಿಸಿದರು. ಹಾಗೆಯೇ, ಯೇಸು ಸಹ ಧಾರ್ಮಿಕ ನಾಯಕರುಗಳನ್ನು ಯೋಹಾನನ ದೀಕ್ಷಾಸ್ನಾನದ ಕುರಿತು ಪ್ರಶ್ನೆ ಮಾಡಿದಾಗ, ಅವರು ಉತ್ತರಿಸಲು ನಿರಾಕರಿಸಿ, ''ನಮಗೆ ಗೊತ್ತಿಲ್ಲ'' ಎಂದು ಹೇಳಿದರು.

**ಮಾರ್ಕ 11:30-33ಅ**

**30 ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ಯೋಹಾನನಿಗೆ ಪರಲೋಕದಿಂದ ಬಂತೋ? ಮನುಷ್ಯರಿಂದ ಬಂತೋ? ಉತ್ತರ ಕೊಡಿರಿ ಅಂದನು.**

**[31] ಆಗ ಅವರು–ಪರಲೋಕದಿಂದ ಬಂತೆಂದು ನಾವು ಹೇಳಿದರೆ ಹಾಗಾದರೆ ನೀವು ಅವನನ್ನು ಯಾಕೆ ನಂಬಲಿಲ್ಲ ಅಂದಾನು;**
**[32] ಮನುಷ್ಯರಿಂದ ಬಂತೆಂದು ಹೇಳಿದರೆ ಏನಾಗುವದೋ ಎಂಬದಾಗಿ ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಯೋಹಾನನು ಪ್ರವಾದಿಯೆಂದು ಜನರೆಲ್ಲರೂ ಅನುಮಾನವಿಲ್ಲದೆ ತಿಳುಕೊಂಡಿದ್ದರಿಂದ ಇವರಿಗೆ ಜನರ ಭಯವಿತ್ತು.**
**[33] ಹೀಗಿರಲಾಗಿ ಅವರು ನಾವು ಅರಿಯೆವು ಎಂದು ಯೇಸುವಿಗೆ ಉತ್ತರ ಕೊಟ್ಟರು ...**

ಆದರೆ ಯೋಹಾನನ ಸಂದೇಶವನ್ನು ಸ್ವೀಕರಿಸುವದಕ್ಕೆ ಅವರು ನಿರಾಕರಿಸಿದ್ದು, ಅವನ ಕರೆಯು–ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಮಾನಸಾಂತರದ ಒಂದು ಗುರುತಾಗಿದ್ದದರಿಂದಲೇ, ವಾಸ್ತವವಾಗಿ ಅವರು ದೇವರ ಸಂಕಲ್ಪವನ್ನು ತಿರಸ್ಕರಿಸಿದರು.

**ಲೂಕ 7:29,30**
**[29] ಇದಲ್ಲದೆ ಜನರೆಲ್ಲರೂ ಸುಂಕದವರೂ ಯೋಹಾನನ ಉಪದೇಶವನ್ನು ಕೇಳಿದಾಗ ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಂಡದ್ದರಲ್ಲಿ ದೇವರು ನೀತಿವಂತರೆಂದು ಒಪ್ಪಿಕೊಂಡರು.**
**[30] ಆದರೆ ಫರಿಸಾಯರೂ ಧರ್ಮೋಪದೇಶಕರೂ ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳದೆ ಹೋದದ್ದರಲ್ಲಿ ತಮ್ಮ ವಿಷಯವಾಗಿ ದೇವರ ಸಂಕಲ್ಪವನ್ನು ನಿರಾಕರಿಸಿದರು.**

ಈ ದಿನಗಳಲ್ಲಿ ನಾವು ಮಾನಸಾಂತರ ಹೊಂದಿ, ಯೇಸುಕ್ರಿಸ್ತನನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ದೇವರ ಚಿತ್ತವನ್ನು ನೆರವೇರಿಸುವವರಾಗುತ್ತೇವೆ ಮತ್ತು ನಾವು ನಮಗಾಗಿ ದೇವರ ಚಿತ್ತವನ್ನು ಸ್ವೀಕರಿಸುವವರಾಗುತ್ತೇವೆ. ನಮ್ಮ ಮುಖಾಂತರವಾಗಿ ದೇವರ ರಾಜ್ಯವು ಈ ಲೋಕಕ್ಕೆ ಬರುವದಕ್ಕಾಗಿ ನಾವು ''ಹೌದು'' ಎಂದು ಹೇಳುವವರಾಗಿದ್ದೇವೆ.

## ಪ್ರತಿಬಿಂಬಿಸುವಿಕೆ

1) ಸ್ನಾನಿಕನಾದ ಯೋಹಾನನ ಬಳಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಯೇಸು ಯಾಕೆ ಹೋದನು?

2) ಈ ಅಧ್ಯಾಯದಲ್ಲಿ ನೀವು ಕಲಿತ ಪ್ರಕಾರ–ನೀರಿನ ದೀಕ್ಷಾಸ್ನಾನ ಹೊಂದಿದಾಗ ನೀವು ಏನನ್ನು ತೋರಿಸುತ್ತೀರಿ?

# 3

# ನೀವು ಆತನ ಶಿಷ್ಯರು ಎಂಬುದಕ್ಕೆ ಒಂದು ಸಾಕ್ಷಿ

## ಒಬ್ಬ ಶಿಷ್ಯನಾಗುವುದಕ್ಕಾಗಿ ಆಮಂತ್ರಣ

ಯೇಸುಕ್ರಿಸ್ತನು ಈ ಲೋಕದಲ್ಲಿದ್ದು ಸೇವೆ ಮಾಡುವಾಗ, ಬಹಳ ಜನರು ಆತನ ಮಾತನ್ನು ಕೇಳಿಸಿಕೊಳ್ಳುವದಕ್ಕಾಗಿ ಕೂಡಿ ಬರುತ್ತಿದ್ದರು ಮತ್ತು ಸ್ವಸ್ಥತೆಯನ್ನು ಹೊಂದುವದಕ್ಕಾಗಿಯೂ, ತಮ್ಮ ಅವಶ್ಯಕತೆಗಳಿಗನುಸಾರವಾಗಿ ಅದ್ಭುತಗಳನ್ನು ಹೊಂದಿಕೊಳ್ಳಲು ಸಹ ಬರುತ್ತಿದ್ದರು. ಕರ್ತನಾದ ಯೇಸುವು ಜನರಿಗೆ–ಆತನನ್ನು ಕೇಳಿಸಿಕೊಳ್ಳುವದು, ಅದ್ಭುತಗಳನ್ನು ಹೊಂದಿಕೊಳ್ಳುವದು ಮಾತ್ರವಲ್ಲದೆ ತನ್ನ ಶಿಷ್ಯರಾಗುವದಕ್ಕೂ ಕರೆಯುತ್ತಿದ್ದನು ಹಾಗೂ ಸವಾಲು ಕೊಡುತ್ತಿದ್ದನು. ಆತನ ಶಿಷ್ಯರಾಗುವುದೆಂದರೆ ಏನೆಂಬುದರ ಅರ್ಥವನ್ನು ಮತ್ತು ಅದರ ಮೌಲ್ಯವನ್ನೂ ಅವರಿಗೆ ಕಲಿಸುತ್ತಿದ್ದನು. ಆತನ ಆಮಂತ್ರಣವು ತೆರೆದದ್ದಾಗಿತ್ತು, ಅದು ಸಹ ಅಷ್ಟು ಸುಲಭವಾಗಿರಲಿಲ್ಲ, ಯಾರು ಬೇಕಾದರೂ ಸಹ ಆತನ ಶಿಷ್ಯರಾಗುವದಕ್ಕೆ ಆಯ್ಕೆ ಮಾಡಿಕೊಳ್ಳಬಹುದಾಗಿತ್ತು.

ಆತನ ಶಿಷ್ಯರಾಗುವದೆಂದರೆ ಏನೆಂಬುದದರ ಅರ್ಥವನ್ನು ಯೇಸು ಹೇಳಿದ ಕೆಲವು ವಿಷಯಗಳು ಇಲ್ಲಿವೆ:

1) ಶಿಷ್ಯರ ಗುರಿಯು, ತನ್ನ ಬೋಧಕನಂತೆ, ಗುರುವಿನಂತೆ, ಯೇಸುಕ್ರಿಸ್ತನಂತೆಯೇ ಆಗುವದೇ ಆಗಿರಬೇಕು (ಮತ್ತಾಯ 10:25).

2) ಶಿಷ್ಯರಾದವರು ಸುಳ್ಳು ಅಪವಾದಗಳು, ಹಿಂಸೆಗಳು ಮತ್ತು ಕಠಿಣ ಪರಿಸ್ಥಿತಿಗಳನ್ನೆಲ್ಲಾ ತಮ್ಮ ಗುರುವಿನಂತೆಯೇ ಎದುರಿಸುವದಕ್ಕೆ ಮನಸ್ಸುಳ್ಳವರಾಗಿರಬೇಕು (ಮತ್ತಾಯ 10:25).

3) ಯಾವ ಶಿಷ್ಯನೂ ತನ್ನ ಗುರುವಿಗಿಂತ ದೊಡ್ಡವನಲ್ಲ ಅಥವಾ ಹೆಚ್ಚಿನವನಲ್ಲ (ಮತ್ತಾಯ 10:24). ಅಂದರೆ ಶಿಷ್ಯರು ಸಹ ತಮ್ಮ ಗುರುವು ನಡೆದ ಅದೇ ಹಾದಿಯಲ್ಲೇ ನಡೆಯಬೇಕು ಮತ್ತು ಶಿಷ್ಯರಿಗೆ ಯಾವುದೇ ರೀತಿಯ ಅಡ್ಡ ಮಾರ್ಗವು ಇರುವುದಿಲ್ಲ.

4) ಶಿಷ್ಯರು ಪರಿಪೂರ್ಣವಾಗಿ ಮತ್ತು ಶಿಕ್ಷಣ ಪಾರಂಗತರಾದಾಗ ಮಾತ್ರ ತನ್ನ ಗುರುವಿನಂತೆ ಆಗಲು ಸಾಧ್ಯ (ಲೂಕ 6:40).

5) ಶಿಷ್ಯರು ತಮ್ಮ ಗುರುವಿನ ಮಾತುಗಳನ್ನು ನಂಬಬೇಕು ಮತ್ತು ಅದರಂತೆ ನಡೆದುಕೊಳ್ಳಬೇಕು (ಯೋಹಾನ 8:31).

6) ಶಿಷ್ಯರಿಗೆ ಇರುವ ಗುರುವಿನ ಮೇಲಿನ ಪ್ರೀತಿಯು, ಈ ಲೋಕದಲ್ಲಿರುವ ಯಾವುದೇ ಸಂಬಂಧಗಳ ಪ್ರೀತಿಯ ಸ್ಥಾನವನ್ನು ತೆಗೆದುಕೊಳ್ಳುವಂಥ ದ್ದಾಗಿರಬೇಕು (ಲೂಕ 14:26).

7) ಶಿಷ್ಯರು ದಿನಾಲು ತಮ್ಮ ಶಿಲುಬೆಯನ್ನು ಹೊತ್ತುಕೊಳ್ಳಬೇಕು (ಲೂಕ 14:27).

8) ಶಿಷ್ಯರು ತಮ್ಮ ಗುರುವಿನ ನಿಮಿತ್ತ ಪ್ರತಿಯೊಂದನ್ನೂ ಬಿಟ್ಟು ಬಿಡಲು ಸಿದ್ಧರಿರಬೇಕು (ಲೂಕ 14:33). ಅಂದರೆ ತಮ್ಮ ಗುರುವಿನ ಮೇಲಿನ ಪ್ರೀತಿ, ಅಪೇಕ್ಷೆಗಳು ಈ ಲೋಕದಲ್ಲಿರುವ ಬೇರೆ ಎಲ್ಲಾದಕ್ಕಿಂತಲೂ ಮಹತ್ವವುಳ್ಳದ್ದಾಗಿರಬೇಕು.

9) ನಮ್ಮ ಜೀವಿತದ ಮೂಲಕ ನಾವು ತೋರಿಸುವ ಪ್ರೀತಿಯು– ಬೇರೆಯವರು ನಮ್ಮನ್ನು ನೋಡಿ ಇವರು ಯೇಸುವಿನ ಶಿಷ್ಯರೆಂದು ತಿಳುಕೊಳ್ಳುವಂತಿರಬೇಕು (ಯೋಹಾನ 13:35).

10) ಶಿಷ್ಯರು ಹೆಚ್ಚಾದ ಫಲಕೊಡುವವರಾಗಿರಬೇಕು. ಇದರಿಂದ ತಮ್ಮ ಜೀವಿತದ ಮೂಲಕ ತಂದೆಗೆ ಮಹಿಮೆ ಉಂಟಾಗುತ್ತದೆ (ಯೋಹಾನ 15:8).

11) ಯೇಸು ಮಾಡಿದಂತೆ–ಬಿಡುಗಡೆ, ಅದ್ಭುತ ಕಾರ್ಯಗಳು, ಸ್ವಸ್ಥ ಮಾಡುವ ಕೆಲಸಗಳನ್ನು ಶಿಷ್ಯರೂ ಸಹ ಮಾಡುವರು (ಮತ್ತಾಯ 10:11; ಯೋಹಾನ 14:12).

## ಶಿಷ್ಯರಿಗೆ ನೀರಿನ ದೀಕ್ಷಾಸ್ನಾನ

ಯೇಸು ಈ ಲೋಕದಲ್ಲಿದ್ದು ಸೇವೆ ಮಾಡುತ್ತಿದ್ದ ಸಮಯದಲ್ಲಿ, ಯೇಸುವಿನ ಶಿಷ್ಯರು ಯೇಸುವಿನ ಸೇವೆಯ ಸಂದೇಶವನ್ನು ಅಂಗೀಕರಿಸಿಕೊಂಡು ಆತನನ್ನೇ ಹಿಂಬಾಲಿಸಲು ಸಿದ್ಧರಾದವರಿಗೆ ದೀಕ್ಷಾಸ್ನಾನ ಕೊಡುತ್ತಿದ್ದರು. ಧಾರ್ಮಿಕ ನಾಯಕರುಗಳು ಇದನ್ನೆಲ್ಲಾ ಗಮನಿಸುತ್ತಿದ್ದು ಯೇಸುವಿನ ಮೇಲೆಯೂ, ಆತನ

ಬೋಧನೆ ಮತ್ತು ಸೇವೆಯ ಮೇಲೆಯೂ ಕೋಪಗೊಳ್ಳುತ್ತಿದ್ದುದರಿಂದ ಇದು ಅಷ್ಟು ಸುಲಭವಾಗಿ ತೆಗೆದುಕೊಳ್ಳುವ ತೀರ್ಮಾನವಾಗಿರಲಿಲ್ಲ, ಜನರು ಯೇಸುವಿನ ಬಳಿಗೆ ಬರದಿದ್ದಿದ್ದರೆ ಆತನ ಶಿಷ್ಯರಿಂದ ನೀರಿನ ದೀಕ್ಷಾಸ್ನಾನ ಮಾಡಿಸಲು ಆಗುತ್ತಿರಲಿಲ್ಲ.

**ಯೋಹಾನ 3:22**
**ಆ ಮೇಲೆ ಯೇಸು ತನ್ನ ಶಿಷ್ಯರೊಡನೆ ಯೂದಾಯ ದೇಶಕ್ಕೆ ಬಂದು ಅಲ್ಲಿ ಅವರ ಕೂಡ ಇದ್ದು ದೀಕ್ಷಾಸ್ನಾನ ಮಾಡಿಸುತ್ತಿದ್ದನು.**

**ಯೋಹಾನ 4:1-3**
**1 ಯೇಸು ಯೋಹಾನನಿಗಿಂತ ಹೆಚ್ಚು ಶಿಷ್ಯರನ್ನು ಮಾಡಿಕೊಂಡು ಅವರಿಗೆ ದೀಕ್ಷಾಸ್ನಾನ ಮಾಡಿಸುತ್ತಾನೆಂಬ ಸುದ್ದಿಯನ್ನು ಫರಿಸಾಯರು ಕೇಳಿದರೆಂದು**
**2-3 ಕರ್ತನಿಗೆ ತಿಳಿದಾಗ ಆತನು ಯೂದಾಯವನ್ನು ಬಿಟ್ಟು ಗಲಿಲಾಯಕ್ಕೆ ತಿರುಗಿ ಹೋದನು. (ಆದರೂ ಸ್ನಾನ ಮಾಡಿಸುತ್ತಿದ್ದವನು ಯೇಸುವಲ್ಲ; ಆತನ ಶಿಷ್ಯರೇ ಮಾಡಿಸುತ್ತಿದ್ದರು.)**

ಹೀಗಿರಲಾಗಿ ಯೇಸುವಿನ ಬೋಧನೆಗಳನ್ನು ಸ್ವೀಕರಿಸಿದ ಜನರು ಆತನ ಶಿಷ್ಯರಾಗುವದಕ್ಕೆ ಆಯ್ಕೆ ಮಾಡಿಕೊಂಡು ಬಂದು ದೀಕ್ಷಾಸ್ನಾನ ಹೊಂದುತ್ತಿದ್ದುದರಿಂದ ಯೇಸು ಮತ್ತು ಆತನ ಹನ್ನೆರಡು ಮಂದಿ ಅಪೊಸ್ತಲರು (ಶಿಷ್ಯರು) ಎಲ್ಲರಿಗೂ ಪರಿಚಿತವಾಗಿದ್ದರು ಮತ್ತು ನೀರಿನ ದೀಕ್ಷಾಸ್ನಾನವು ಯೇಸು ಹಾಗೂ ಆತನ ಶಿಷ್ಯರೂ ಸೇರಿದಂತೆ, ಸ್ನಾನಿಕನಾದ ಯೋಹಾನನು ಅಭ್ಯಾಸಿಸಿದಂತೆಯೇ ಸಂಪೂರ್ಣವಾಗಿ ಮುಳುಗುವದು ಎಂಬುದನ್ನು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

## ನೀರಿನ ದೀಕ್ಷಾಸ್ನಾನ ಮತ್ತು ಮಹಾ ಆಜ್ಞೆ

ಆತನ ಪುನರುತ್ಥಾನದ ನಂತರ, ಆತನು ಮೇಲಕ್ಕೆ ಎತ್ತಲ್ಪಡುವದಕ್ಕೆ ಮುಂಚೆ ಕರ್ತನಾದ ಯೇಸು ನಮಗೆ ಏನು ಮಾಡಬೇಕೆಂಬದನ್ನು ವಿವರಿಸಿ ಹೇಳಿದ್ದು– ‘‘ಮಹಾ ಆಜ್ಞೆ’’ ಆಗಿದೆ.

**ಮತ್ತಾಯ 28:19,20**
**19 ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ**
**20 ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ, ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು. ಆಮೆನ್.**

ಆ ಮಹಾ ಆಜ್ಞೆಯು–ಕರ್ತನ ಆಜ್ಞೆಯಾಗಿದೆ. ಅದು ಯಾವದೆಂದರೆ– ''ಹೊರಟು ಹೋಗಿ'' ಎಲ್ಲಾ ದೇಶದ ಜನರನ್ನು ''ಶಿಷ್ಯರನ್ನಾಗಿ ಮಾಡುವದೇ'' ಗ್ರೀಕ್ ಪದವಾದ 'ಮಾಥೆಟ್ಯೆಯೋ' ಎಂಬುದರ ಅನುವಾದವು ''ಶಿಷ್ಯರನ್ನು ಮಾಡುವದು'' ಅಂದರೆ–''ಶಿಷ್ಯರಾಗುವದು,'' ''ಕಲಿಯುವವರು,'' ''ಒಬ್ಬನ ಬೋಧನೆಯನ್ನು ಅನುಸರಿಸಿ ನಡೆಯುವವನು,'' ಕಲಿಯಲು ಮನಸ್ಸಿರುವ ಯಾರಿಗೇ ಆಗಲಿ ಗುರುವಿನ ಮಾತುಗಳನ್ನು ಉಪದೇಶಿಸುವುದು, ಕಲಿಸುವುದು ಮತ್ತು ಶಿಕ್ಷಣ ನೀಡುವುದು ಅಂದರೆ ಗುರುವಿನಂತೆಯೇ ಮಾರ್ಪಡುವುದು. ಇದು ಯೋಚಿಸುವುದರ ಪ್ರಯಾಸವನ್ನು ಸೂಚಿಸುತ್ತದೆ. ನಾವು ಮೊದಲೇ ನೋಡಿದಂತೆ ಕರ್ತನಾದ ಯೇಸು ನಮಗೆ ಆಜ್ಞಾಪಿಸುವದನ್ನೆಲ್ಲಾ ಕೈಕೊಳ್ಳುವವನೂ, ಯೇಸುವಿನಂತೆ ಮಾರ್ಪಡಲು ಆಯ್ಕೆ ಮಾಡಿಕೊಂಡವನೇ ಆತನ ಶಿಷ್ಯನು. ಶಿಷ್ಯರನ್ನಾಗಿ ಮಾಡಿರಿ ಎಂಬ ಆಜ್ಞೆಯಲ್ಲಿ ಅವರಿಗೆ (ಶಿಷ್ಯರಾಗಬೇಕೆಂದು ಆಯ್ಕೆ ಮಾಡಿಕೊಳ್ಳುವವರಿಗೆ) ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿರಿ ಎಂಬುದೂ ಸಹ ಒಳಗೊಂಡಿದೆ. ಸತ್ಯವೇದದ ದೇವರನ್ನು ಗುರುತಿಸುವ ಹಾಗೆ, ನಾವು ಅವರಿಗೆ ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುವವರಾಗಿದ್ದೇವೆ.

**ಆದ್ದರಿಂದ ಯೇಸುಕ್ರಿಸ್ತನ ಶಿಷ್ಯನಾಗುವದಕ್ಕೆ ನೀನು ಮಾಡಿಕೊಂಡ ಆಯ್ಕೆಯನ್ನು ಎಲ್ಲರಿಗೂ ಸಾಕ್ಷಿಯಾಗಿ ತಿಳಿಸುವದೇ ''ನೀರಿನ ದೀಕ್ಷಾಸ್ನಾನ'' ವಾಗಿದೆ.**

ಇದಲ್ಲದೆ ನೀನು ಆತನಂತೆಯೇ ಮಾರ್ಪಡುವದಕ್ಕಾಗಿ ಈ ಪ್ರಯಾಣದಲ್ಲಿ, ಕಲಿಯುವ, ಶಿಕ್ಷಣ ಹೊಂದುವ ಮತ್ತು ತಿಳಿದುಕೊಳ್ಳುವದಕ್ಕಾಗಿ ಮಾಡಿರುವ ತೀರ್ಮಾನವಾಗಿದೆ. ಈ ಒಂದು ಮುಂದುವರಿಯುವಿಕೆಯಲ್ಲಿ, ಕಠಿಣ ವಿಷಯಗಳು, ಹಿಂಸೆಗಳು, ಪ್ರಯಾಸಗಳು ತ್ಯಾಗ ಮುಂತಾದ ವಿಷಯಗಳೊಂದಿಗೆ ಮುಂದೆ ಹೋಗಲು ನೀನು ತೆಗೆದುಕೊಂಡ ತೀರ್ಮಾನವಾಗಿದೆ. ಎಂದಿಗೂ ಹಿಂದಿರುಗಿ ನೋಡದ ಶಿಷ್ಯನಂತೆ ಯೇಸುಕ್ರಿಸ್ತನನ್ನೇ ಹಿಂಬಾಲಿಸುವದಕ್ಕೆ ನೀನು ತೆಗೆದುಕೊಂಡ ತೀರ್ಮಾನ ಇದಾಗಿದೆ.

## ಶಿಷ್ಯರು, ಶಿಷ್ಯರಿಗೆ ದೀಕ್ಷಾಸ್ನಾನ ಮಾಡಿಸುವದು

ಒಂದು ಕಡೆ ಟಿಪ್ಪಣಿಯಾಗಿ ನಾವು ಗಮನಿಸಿದ್ದೇನೆಂದರೆ, ಒಬ್ಬ ವ್ಯಕ್ತಿಯು ಯೇಸುಕ್ರಿಸ್ತನ ಶಿಷ್ಯನಾಗುವದಕ್ಕೆ ತೀರ್ಮಾನ ತೆಗೆದುಕೊಂಡು, ನೀರಿನಿಂದ ದೀಕ್ಷಾಸ್ನಾನ ತೆಗೆದುಕೊಳ್ಳುವ ಅದೇ ವ್ಯಕ್ತಿಯು ಯೇಸುಕ್ರಿಸ್ತನ ಕುರಿತು

ಬೇರೆಯವರೊಂದಿಗೆ ಹಂಚಿಕೊಳ್ಳಬಹುದು, ಶಿಷ್ಯರನ್ನಾಗಿ ಮಾಡಬಹುದು ಹಾಗೂ ಅವರಿಗೆ ದೀಕ್ಷಾಸ್ನಾನ ಕೊಡಬಹುದು. ಶಿಷ್ಯರು–ಯೇಸುಕ್ರಿಸ್ತನ ಶಿಷ್ಯನಾಗುವದಕ್ಕೆ ಆಯ್ಕೆ ಮಾಡಿಕೊಳ್ಳುವ ಹೊಸ ಜನರಿಗೆ ದೀಕ್ಷಾಸ್ನಾನ ಕೊಡಬಹುದಾಗಿದೆ. ಉದಾಹರಣೆಗೆ, ಸ್ತೆಫನನು ಯರೂಸಲೇಮಿನ ಸಭೆಯಲ್ಲಿ (ಡೀಕನ್) ಸಹಾಯಕನಾಗಿದ್ದನು. ಅವನು ಸಮಾರ್ಯಕ್ಕೆ ಹೋಗಿ ಯೇಸುವಿನ ವಿಷಯವಾಗಿ ಪ್ರಚಾರ ಮಾಡಿದನು ಮತ್ತು ಸಮಾರ್ಯದಲ್ಲಿ ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 8:12). ಫಿಲಿಪ್ಪನು ಸಹ ಐಥಿಯೋಪ್ಯ ದೇಶದ ರಾಣಿಯ ಕಂಚುಕಿಯಾದ ಐಥಿಯೋಪಿಯದ ಮನುಷ್ಯನಿಗೆ ದೀಕ್ಷಾಸ್ನಾನ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 8:37,38).

ಸೌಲನೆನಿಸಿಕೊಂಡಿದ್ದ ಪೌಲನಿಗೆ ದಮಸ್ಕದಲ್ಲಿದ್ದ ಒಬ್ಬ ಶಿಷ್ಯನಾದ ಅನನೀಯನೆಂಬುವನು ದೀಕ್ಷಾಸ್ನಾನ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 9:10,18).

## ಪ್ರತಿಬಿಂಬಿಸುವಿಕೆ

1) ಈ ಅಧ್ಯಾಯದಲ್ಲಿ ಯೇಸುಕ್ರಿಸ್ತನ ಶಿಷ್ಯರಾಗುವದೆಂದರೆ ಅರ್ಥವೇನು? ಇದರಲ್ಲಿ ಕೊಡಲ್ಪಟ್ಟ 11 ಹೇಳಿಕೆಗಳನ್ನು ತಿರುಗಿ ಓದಿರಿ ಮತ್ತು ಅದು ವೈಯಕ್ತಿಕವಾಗಿ ನಿಮ್ಮ ಜೀವನದ ಕುರಿತು ಏನು ಹೇಳುತ್ತದೆ ಎಂದು ಪುನ: ಗಮನಿಸಿರಿ.

2) ನೀವು ಯೇಸುಕ್ರಿಸ್ತನನ್ನು ನಂಬುವುದಕ್ಕೂ ಮತ್ತು ಆತನ ಶಿಷ್ಯನಾಗಿ ಆತನನ್ನೇ ಹಿಂಬಾಲಿಸುವುದಕ್ಕೂ ನೀವು ನಿಮ್ಮ ವೈಯಕ್ತಿಕ ಆಯ್ಕೆಯನ್ನು ಮಾಡಿಕೊಳ್ಳುವಿರೋ?

# 4
# ಯೇಸುಕ್ರಿಸ್ತನಲ್ಲಿರುವ ನಿಮ್ಮ ನಂಬಿಕೆಯ ಒಂದು ಸಾಕ್ಷಿ

ಕರ್ತನಾದ ಯೇಸುವಿನ ಸ್ವರ್ಗಾರೋಹಣದ ನಂತರ, ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿರುವ ಪ್ರಕಾರ ಪಂಚಾಶತ್ತಮ ದಿನದಂದು 120 ಶಿಷ್ಯರು ಪವಿತ್ರಾತ್ಮನ ಬಲವನ್ನು ಹೊಂದಿದರು. ಅವರು ಯೆರೂಸಲೇಮು ಮೊದಲುಗೊಂಡು, ಇನ್ನಿತರ ಪಟ್ಟಣಗಳಲ್ಲಿ ಯೇಸುಕ್ರಿಸ್ತನ ಸುವಾರ್ತೆಯನ್ನು ಜನರಿಗೆ ಸಾರುವದಕ್ಕೆ ಪ್ರಾರಂಭಿಸಿದರು.

## ಯೇಸುಕ್ರಿಸ್ತನ ಶುಭಸಂದೇಶ

ಯೇಸುಕ್ರಿಸ್ತನ ಸುವಾರ್ತೆ ಎಂದರೆ, ಈ ಲೋಕದ ಪಾಪವನ್ನು ಅದರ ಪರಿಣಾಮಗಳಿಂದ ಬಿಡಿಸುವುದಕ್ಕಾಗಿ ಆತನು ರಕ್ಷಕನಾಗಿ ಬಂದಿರುವುದೇ ಆಗಿದೆ. ನಮ್ಮ ಪಾಪಗಳ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡು ನಾವು ಹೊಂದಬೇಕಾದ ಮರಣವನ್ನು ತಾನು ಹೊಂದಿದನು. ಆತನು ಪಾಪದ, ಸೈತಾನನ, ವ್ಯಾಧಿಯ ಬಲವನ್ನು ಮುರಿದುಹಾಕಿ ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿದನು ಮತ್ತು ರಕ್ಷಣೆಯೆಂಬ ಉಚಿತ ಉಡುಗೊರೆಯನ್ನು ನೀಡಿದನು. ಆತನು ಶಿಲುಬೆಯ ಮೇಲೆ ಮರಣ ಹೊಂದಿ ಹೂಣಲ್ಪಟ್ಟು ತಿರುಗಿ ಮೂರನೇ ದಿನದಲ್ಲಿ ಎದ್ದು, ಪರಲೋಕಕ್ಕೆ ಏರಿಹೋಗುವಕ್ಕೆ ಮೊದಲು 500ಕ್ಕೂ ಹೆಚ್ಚು ಜನರಿಗೆ ಕಾಣಿಸಿಕೊಂಡು ತಾನು ಜೀವಿತನೆಂದು ತೋರ್ಪಡಿಸಿಕೊಂಡನು. ಯೇಸುಕ್ರಿಸ್ತನನ್ನು ನಂಬಿ, ಅಂಗೀಕರಿಸುವುದರ ಮೂಲಕ ಹಾಗೂ ಮಾನಸಾಂತರ ಹೊಂದುವುದರ ಮೂಲಕ ಆತನು ಕೊಡುವ ಉಚಿತವಾದ ರಕ್ಷಣೆಯನ್ನು ಯಾರು ಬೇಕಾದರೂ ಹೊಂದಿಕೊಳ್ಳಬಹುದಾಗಿದೆ. ನಾವು ಯೇಸುವನ್ನು ನಮ್ಮ ಒಡೆಯನೂ, ರಕ್ಷಕನೂ ಆಗಿ ಸ್ವೀಕರಿಸಿದಾಗ, ತಿರುಗಿ ಹುಟ್ಟುತ್ತೇವೆ, ದೇವ ಮಕ್ಕಳಾಗುತ್ತೇವೆ. ಅಂಧಕಾರದ ದೊರೆತನದಿಂದ ಬಿಡಿಸಲ್ಪಟ್ಟು ಆತನ ಮಹಿಮೆಯ ರಾಜ್ಯದೊಳಗೆ ಪ್ರವೇಶಿಸುತ್ತೇವೆ ಹಾಗೂ ಇನ್ನೂ ಅನೇಕ ಕಾರ್ಯಗಳು ಉಂಟಾಗುತ್ತವೆ. ಇದೇ ಶುಭವಾರ್ತೆ (ಸುವಾರ್ತೆ)! ಧಾರ್ಮಿಕತೆಯು ಇದನ್ನು ನಮಗಾಗಿ ಮಾಡುವದಿಲ್ಲ. ನಮ್ಮ ಸ್ವಂತ ವೆಚ್ಚದಿಂದಾಗಲಿ, ಒಳ್ಳೇ ಕ್ರಿಯೆಗಳಿಂದಾಗಲಿ ಅಥವಾ ಧಾರ್ಮಿಕ

ಪ್ರಯಾಸಗಳಿಂದಾಗಲೀ ಇದನ್ನು ಹೊಂದಿಕೊಳ್ಳಲು ಆಗುವದಿಲ್ಲ. ಇದು ನಂಬಿಕೆಯ ಮೂಲಕವೇ ನಾವು ಹೊಂದಿಕೊಳ್ಳುವ ಉಚಿತಾರ್ಥವಾದ ವರವೇ (ಕೊಡುಗೆ) ಆಗಿದೆ.

## ನೀವು ಯೇಸುವಿನಲ್ಲಿ ನಂಬಿಕೆ ಇಡುವುದಾದರೆ, ಬಂದು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ

ಯೇಸುಕ್ರಿಸ್ತನಲ್ಲಿ ನಂಬಿಕೆ ಇಡುವಂತೆ, ಯೇಸು ಸಾರಿದ ಸುವಾರ್ತೆಯ ಮೂಲಕ ಜನರಿಗೆ ಆಮಂತ್ರಣ ನೀಡಿದ್ದರ ಕುರಿತಾದ ದಾಖಲೆಯನ್ನು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಾವು ನೋಡುತ್ತೇವೆ. ಆನಂತರದಲ್ಲಿ ಯೇಸುವಿನ ಮೇಲೆ ನಂಬಿಕೆ ಇಡುವವರೆಲ್ಲರೂ ತಮ್ಮ ವಿಶ್ವಾಸಗಳನ್ನು ಅರಿಕೆ ಮಾಡಿಕೊಂಡು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದರ ಮೂಲಕ ಸಾರ್ವಜನಿಕವಾಗಿ ತಮ್ಮ ಸಾಕ್ಷಿ (ನಂಬಿಕೆ) ಯನ್ನು ಅರಿಕೆ ಮಾಡುವಂತೆಯೂ ಸಹ ಆಹ್ವಾನಿಸಲಾಯಿತು.

ಜನರು ನೀರಿನಿಂದ ದೀಕ್ಷಾಸ್ನಾನ ಹೊಂದಿದ್ದನ್ನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ದಾಖಲಿಸಲಾಗಿರುವ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

- ಪಂಚಾಶತ್ತಮ ದಿನದಲ್ಲಿದ್ದಂತ ವಿಶ್ವಾಸಿಗಳು (ಅಪೊಸ್ತಲರ ಕೃತ್ಯಗಳು 2:38–41)
- ಸಮಾರ್ಯ ಪಟ್ಟಣದ ವಿಶ್ವಾಸಿಗಳು (ಅಪೊಸ್ತಲರ ಕೃತ್ಯಗಳು 8:12,13)
- ಪೌಲನಾದ ಸೌಲನು (ಅಪೊಸ್ತಲರ ಕೃತ್ಯಗಳು 9:17,18; ಅಪೊಸ್ತಲರ ಕೃತ್ಯಗಳು 22:16)
- ಕೊರ್ನೇಲ್ಯನ ಮನೆಯವರು (ಅಪೊಸ್ತಲರ ಕೃತ್ಯಗಳು 10:47,48)
- ಫಿಲಿಪ್ಪಿಯಲ್ಲಿನ ವಿಶ್ವಾಸಿಗಳು (ಅಪೊಸ್ತಲರ ಕೃತ್ಯಗಳು 16:14,15,31–34)
- ಕೊರಿಂಥದಲ್ಲಿನ ವಿಶ್ವಾಸಿಗಳು (ಅಪೊಸ್ತಲರ ಕೃತ್ಯಗಳು 18:7,8)
- ಎಫೆಸದಲ್ಲಿನ ವಿಶ್ವಾಸಿಗಳು (ಅಪೊಸ್ತಲರ ಕೃತ್ಯಗಳು 19:1–5)

## ಸಾರ್ವಜನಿಕವಾದ ಒಂದು ಅರಿಕೆ

ಆದಿ ಸಭೆಯಲ್ಲಿ ಈ ಎಲ್ಲಾ ಜನರಿಗೆ ನೀರಿನಿಂದ ದೀಕ್ಷಾಸ್ನಾನ ತೆಗೆದು ಕೊಳ್ಳುವುದಕ್ಕೆ ತೀರ್ಮಾನಿಸುವುದು ಅಷ್ಟು ಸುಲಭವಾಗಿರಲಿಲ್ಲ. ಅನೇಕರು ಯೇಸುಕ್ರಿಸ್ತನಲ್ಲಿಟ್ಟ ವಿಶ್ವಾಸದ ನಿಮಿತ್ತ ಹಿಂಸೆಗೆ ಒಳಗಾದವರಾಗಿದ್ದರು. ಆದರೆ ಅವರು ತಾವು ಯಾರಲ್ಲಿ ನಂಬಿಕೆ ಇಡುತ್ತೇವೆಂದು ತಿಳಿದು ಆ ನಂಬಿಕೆಯಲ್ಲಿಯೇ ಧೈರ್ಯವಾಗಿ ಎದ್ದು ನಿಂತರು.

ಕರ್ತನಾದ ಯೇಸು ವಾಗ್ದಾನ ಮಾಡಿರುವದೇನೆಂದರೆ, ಭೂಲೋಕದಲ್ಲಿ ಎಲ್ಲರ ಮುಂದೆ ನಾವು ಆತನನ್ನು ಒಪ್ಪಿಕೊಳ್ಳುವುದಾದರೆ, ಆತನೂ ಸಹ ತಂದೆಯ ಮುಂದೆ ನಮ್ಮನ್ನು ತನ್ನವರೆಂದು ಒಪ್ಪಿಕೊಳ್ಳುವನು!

**ಮತ್ತಾಯ 10:32,33**

**32 ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು.**

**33 ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು.**

ನೀರಿನ ದೀಕ್ಷಾಸ್ನಾನವು ಯೇಸುಕ್ರಿಸ್ತನಲ್ಲಿರುವ ನಿಮ್ಮ ನಂಬಿಕೆಯನ್ನೂ, ನಿಮ್ಮ ಜೀವನದ ಒಡೆಯನೂ, ರಕ್ಷಕನೂ ಎಂದು ಸಾರ್ವಜನಿಕವಾಗಿ ಅರಿಕೆ ಮಾಡುವುದಾಗಿದೆ. ನೀನು ಯೇಸುವಿನಲ್ಲಿ ನಂಬಿಕೆಯಿಟ್ಟು, ನಿನ್ನ ಪಾಪಗಳಿಂದ ಬಿಡುಗಡೆ ಹೊಂದಿ ಆತನ ಉಚಿತವಾದ ವರವಾದ ರಕ್ಷಣೆಯನ್ನು ಹೊಂದಿಕೊಂಡಿರುವುದನ್ನು ಜನರ ಮುಂದೆ ಸ್ವೀಕಾರ ಮಾಡಿಕೊಳ್ಳುವುದು, ಸಾಕ್ಷಿಯಾಗಿ ಹೇಳುವುದು ಮತ್ತು ಅದನ್ನು ಘೋಷಿಸುವುದೇ ಆಗಿದೆ.

## ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ, ಜನರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವುದನ್ನು ದಾಖಲಿಸಲಾಗಿರುವುದನ್ನು ಗುರುತಿಸುತ್ತೇವೆ.

ಅದರ ಕುರಿತಾದ ಕೆಲವು ವಿಷಯಗಳು ಇಲ್ಲಿವೆ:

**ಅಪೊಸ್ತಲರ ಕೃತ್ಯಗಳು 2:38**
**ಪೇತ್ರನು ಅವರಿಗೆ–ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ;**

**ಅಪೊಸ್ತಲರ ಕೃತ್ಯಗಳು 8:16**
**ಯಾಕಂದರೆ ಆ ವರವು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು.**

**ಅಪೊಸ್ತಲರ ಕೃತ್ಯಗಳು 10:48**
**ಅವರಿಗೆ–ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು. ಆಮೇಲೆ ಅವರು ಅವನನ್ನು–ಇನ್ನೂ ಕೆಲವು ದಿವಸ ಇರಬೇಕೆಂದು ಬೇಡಿಕೊಂಡರು.**

**ಅಪೊಸ್ತಲರ ಕೃತ್ಯಗಳು 19:5**
**ಅವರು ಈ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು.**

ಕರ್ತನಾದ ಯೇಸುವಿನ ಹೆಸರಿನಲ್ಲಿ ನೀನು ದೀಕ್ಷಾಸ್ನಾನ ಮಾಡಿಸಿಕೊಳ್ಳುವುದರ ಅರ್ಥ–ನೀನು ಆತನೊಂದಿಗೆ ನಿನ್ನನ್ನು ಗುರುತಿಸಿಕೊಳ್ಳುವುದೇ ಆಗಿದೆ. ಸಾರ್ವಜನಿಕವಾಗಿ ಯೇಸುವಿನೊಂದಿಗೆ ಗುರುತಿಸಿಕೊಳ್ಳುತ್ತಿರುವೆ. ಇದೂ ಸಹ ಒಂದು ಆತ್ಮೀಕತೆಯ ಸೂಚನೆಯಾಗಿದೆ. ಅದನ್ನು ನಾವು ಮುಂದಿನ ಅಧ್ಯಾಯದಲ್ಲಿ ವಿವರಿಸುತ್ತೇವೆ.

''ಯೇಸುವಿನ ಹೆಸರಿನಲ್ಲಿ'' ಎಂದು ಉಪಯೋಗಿಸಲ್ಪಡುವ ಪದವು ಯಾರ ಅಧಿಕಾರದಿಂದ ಮತ್ತು ಯಾರ ಪ್ರತಿನಿಧಿತ್ವದಿಂದ ನಾವು ಮಾಡುತ್ತಿದ್ದೇವೆ ಎಂದು ಸೂಚಿಸುತ್ತದೆ. ಆದ್ದರಿಂದ ಯಾರಾದರೂ ''ಯೇಸುವಿನ ಹೆಸರಿನಲ್ಲಿ'' ದೀಕ್ಷಾಸ್ನಾನ ಮಾಡಿಸಿದರೆ, ಅದರ ಅರ್ಥ–ಯೇಸುಕ್ರಿಸ್ತನಿಂದ ನಮಗೆ ಕೊಡಲ್ಪಟ್ಟ ಮಹಾ ಆಜ್ಞೆಯ ಮೂಲಕ ಮತ್ತು ಯೇಸುಕ್ರಿಸ್ತನು ಕೊಟ್ಟ ಅಧಿಕಾರದಿಂದ ಈ ಹೊಸ ಶಿಷ್ಯನಿಗೆ ನೀರಿನ ದೀಕ್ಷಾಸ್ನಾನ ಕೊಡುತ್ತೇವೆಂದು ಹೇಳುವುದಾಗಿದೆ. ಆದ್ದರಿಂದ ನಾವು ಇದನ್ನು ಆತನ ಹೆಸರಿನಿಂದ ಆತನ ಪರವಾಗಿ, ಆತನ ಪ್ರತಿನಿಧಿಯಾಗಿ, ಸಂಪೂರ್ಣ ಅಧಿಕಾರದೊಂದಿಗೆ ಮತ್ತು ಆತನಿಂದ ಬಲ ಹೊಂದಿದವರಾಗಿ ಮಾಡುತ್ತಿದ್ದೇವೆ.

ಹೀಗಿರುವುದರಿಂದ, ಜನರಿಗೆ ದೀಕ್ಷಾಸ್ನಾನ ಮಾಡಿಸುವಾಗ ನಾವು ''ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರನ್ನು ಹೇಳಿ, ಯೇಸುವಿನ ಹೆಸರಿನಲ್ಲಿ ನಾನು ನಿನಗೆ ದೀಕ್ಷಾಸ್ನಾನ ಮಾಡಿಸುತ್ತೇನೆ'' ಎಂದು ಹೇಳುತ್ತೇವೆ. ಇದರ ಅರ್ಥವೇನೆಂದರೆ, ನಾವು ಇದನ್ನು ಯೇಸುಕ್ರಿಸ್ತನಿಂದ ನಮಗೆ ಕೊಡಲ್ಪಟ್ಟ ಅಧಿಕಾರದಿಂದ, ಮತ್ತು ಸತ್ಯವೇದದ ದೇವರೊಂದಿಗೆ, ಯೇಸುಕ್ರಿಸ್ತನೊಂದಿಗೆ ಈ ಮೂಲಕ ತನ್ನನ್ನು ಗುರುತಿಸಿಕೊಳ್ಳುವ ಈ ವ್ಯಕ್ತಿಗೆ ಎಂಬುದೇ ಆಗಿದೆ.

## ಪ್ರತಿಬಿಂಬಿಸುವಿಕೆ

1) ನೀನು ಸಂಪೂರ್ಣವಾಗಿ ಯೇಸುಕ್ರಿಸ್ತನ ಸುವಾರ್ತೆ ಯನ್ನು ನಂಬುತ್ತೀಯೋ ಮತ್ತು ಅದನ್ನು ಅರ್ಥ ಮಾಡಿಕೊಂಡಿದ್ದೀಯೋ?

2) ನೀನು ಸಾರ್ವಜನಿಕವಾಗಿ ಯೇಸುಕ್ರಿಸ್ತನನ್ನು ನಿನ್ನ ರಕ್ಷಕನೂ ಒಡೆಯನೂ ಎಂದು ಸ್ವೀಕರಿಸಲು ಸಿದ್ಧವಿದ್ದೀಯೋ?

# 5

# ಯೇಸುವಿನೊಂದಿಗೆ ನಿಮ್ಮನ್ನು ಗುರುತಿಸಿಕೊಳ್ಳುವ ಒಂದು ಘೋಷಣೆ

ಕರ್ತನಾದ ಯೇಸುವು ಸಭೆಯಲ್ಲಿ ಎರಡು ಕಾರ್ಯ ವಿಧಾನ ಗಳನ್ನು ನೇಮಿಸಿದ್ದಾನೆ. ಅವುಗಳು: ದೀಕ್ಷಾಸ್ನಾನ ಮತ್ತು ಕರ್ತನ ಮೇಜು. ಈ ಎರಡೂ ಸಂಗತಿಗಳು ಸಹ ನಮ್ಮ ಮುಖಾಂತರ ವಾಗಿ ಯೇಸುಕ್ರಿಸ್ತನು ಸಂಪೂರ್ಣಗೊಳಿಸುವ ಆತನ ಮರಣ ಮತ್ತು ಪುನರುತ್ಥಾನವನ್ನು ಪ್ರಚುರಪಡಿಸುವಂತಹ ಶಕ್ತಿಯುತ ಮಾರ್ಗಗಳಾಗಿವೆ. ಕರ್ತನ ನಡೆಸುವಿಕೆಯಂತೆ, 1 ಕೊರಿಂಥದವರಿಗೆ 11:26 ರಲ್ಲಿ ಅಪೊಸ್ತಲನಾದ ಪೌಲನು ಬರೆದಿರುವುದೇನೆಂದರೆ–''*ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನ ಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿ ಪಡಿಸುತ್ತೀರಿ.*'' ಆದದರಿಂದ ನಾವು ಕರ್ತನ ಮೇಜಿನಲ್ಲಿ ಪಾಲು ತೆಗೆದುಕೊಳ್ಳುವಾಗ, ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿ ಮುಗಿಸಿದ ಕಾರ್ಯಗಳ ಕುರಿತಾದ ನಮ್ಮ ನಂಬಿಕೆಯನ್ನು ಮತ್ತು ಆತನ ಶೀಘ್ರ ಬರೋಣವನ್ನು ಸಾರುವವರೂ, ಪ್ರಚುರ ಪಡಿಸುವವರೂ, ಮತ್ತು ಘೋಷಿಸುವವರೂ ಆಗಿದ್ದೇವೆ.

ಅದೇ ಪ್ರಕಾರ, ನೀರಿನ ದೀಕ್ಷಾಸ್ನಾನವು ಯೇಸುಕ್ರಿಸ್ತನೊಂದಿಗೆ ನಮ್ಮನ್ನು ಗುರುತಿಸಿಕೊಳ್ಳುವ ಒಂದು ಘೋಷಣೆಯಾಗಿದೆ. ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನೂ ನಾವು ದೃಶ್ಯ ಮತ್ತು ಅದೃಶ್ಯ ಲೋಕಕ್ಕೆ ಪ್ರಚುರ ಪಡಿಸುವವರೂ ಮತ್ತು ಪ್ರಕಟಿಸುವವರೂ ಆಗಿದ್ದೇವೆ. ಇದು ನಮ್ಮಲ್ಲಿರುವ ಆತ್ಮೀಕವಾದ ಸತ್ಯವಾಗಿದೆ. **ನೀರಿನ ದೀಕ್ಷಾಸ್ನಾನವು–ಈಗಾಗಲೇ ಆತ್ಮೀಕ ರೀತಿಯಲ್ಲಿ ನಮ್ಮೊಳಗೆ ಉಂಟಾಗಿರುವುದರ ಕುರಿತಾಗಿ ತೋರ್ಪಡಿಸುವ ಗುರುತಾಗಿದೆ ಹಾಗೂ ಒಂದು ಶಕ್ತಿಯುತವಾದ ಪ್ರಚಾರವಾಗಿದೆ.**

ಅಪೊಸ್ತಲನಾದ ಪೌಲನು ತಿಳಿಸಿರುವುದನ್ನು ಇಲ್ಲಿ ಕೊಡಲಾಗಿದೆ:

**ರೋಮಾಪುರದವರಿಗೆ 6:3,4**

**3 ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?**

**[4] ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು.**

**ಕೊಲೊಸ್ಸೆ ಯವರಿಗೆ 2:12**
**ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವುದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ.**

ನಾವು ಹೊಸದಾಗಿ ಹುಟ್ಟಿದಾಗ ದೇವರು ನಮ್ಮನ್ನು ಕ್ರಿಸ್ತನಲ್ಲಿಗೆ ಕರೆತಂದನು (1 ಕೊರಿಂಥದವರಿಗೆ 1:30). ನಾವು ಆತನಲ್ಲಿದ್ದವರಾಗಿ, ಆತ್ಮೀಯ ರೀತಿಯಲ್ಲಿ ಆತನೊಂದಿಗೆ ಒಂದಾಗಿದ್ದೇವೆ (1 ಕೊರಿಂಥದವರಿಗೆ 6:17). ಪವಿತ್ರಾತ್ಮನು ನಮ್ಮನ್ನು ಕ್ರಿಸ್ತನೊಳಗೆ ಇಟ್ಟನು (1 ಕೊರಿಂಥದವರಿಗೆ 12:13). ಆತ್ಮೀಕವಾಗಿ ನಾವು ಮೊದಲು ಕ್ರಿಸ್ತನಲ್ಲೇ ಇದ್ದೆವು. ನಾವು ''ಆತನೊಳಗಿರುವುದೇ'' ಮಾತ್ರವಲ್ಲದೆ, ಆತನ ಮರಣ (ಶಿಲುಬೆಗೆ ಹಾಕಲ್ಪಡುವದು) ಹೂಣಲ್ಪಡುವಿಕೆ, ಪುನರುತ್ಥಾನ ಮತ್ತು ಆಸನಾರೂಢನಾಗಿರುವುದನ್ನು ನಾವು ಗುರುತಿಸುವವರಾಗಿದ್ದೇವೆ. ಇದೇ ಗುರುತಿಸಿಕೊಳ್ಳುವಿಕೆಯಾಗಿದೆ.

- **ಆತನ ಮರಣದಲ್ಲಿ (ಶಿಲುಬೆಗೆ ಹಾಕಲ್ಪಟ್ಟದ್ದರಲ್ಲಿ) ಗುರುತಿಸಿಕೊಂಡಿದ್ದೇವೆ:** ಕ್ರಿಸ್ತನು ಮರಣ ಹೊಂದಿದಾಗ, ನಾವು ಆತನೊಂದಿಗೆ ಸತ್ತೆವು. ಹಳೆಯ ಪಾಪ ಸ್ವಭಾವವು, ''ಹಳೇ ಮನುಷ್ಯನು'' ಆತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟನು (ರೋಮಾಪುರದವರಿಗೆ 6:6). ನಮ್ಮೊಳಗೆ ಹಳೆಯ ಪಾಪ ಸ್ವಭಾವವು ಇನ್ನೆಂದಿಗೂ ಇರುವುದಿಲ್ಲ ಈಗ ನಾವು ದೈವಿಕ ಸ್ವಭಾವದಲ್ಲಿ ಪಾಲುಗಾರರಾಗಿದ್ದೇವೆ (2 ಪೇತ್ರನು 1:4). ನಮ್ಮ ಜೀವಿತಗಳಲ್ಲಿದ್ದ ಪಾಪದ ಶಕ್ತಿಯು ಮುರಿದು ಹೋಯಿತು ಮತ್ತು ಇನ್ನೆಂದಿಗೂ ನಾವು ಪಾಪಕ್ಕೆ ದಾಸರಲ್ಲ (ರೋಮಾಪುರದವರಿಗೆ 6:14).
- **ಆತನ ಹೂಣಲ್ಪಡುವಿಕೆಯಲ್ಲಿ ಗುರುತಿಸಿಕೊಂಡಿದ್ದೇವೆ:** ಕ್ರಿಸ್ತನು ಹೂಣಲ್ಪಟ್ಟಾಗ, ನಾವೂ ಸಹ ಹೂಣಲ್ಪಟ್ಟೆವು. ಅಂದರೆ ನಾವು ಹಳೇ ಜೀವಿತದಿಂದ ಬೇರ್ಪಡಿಸಲ್ಪಟ್ಟೆವು. ಹಳೆಯದೆಲ್ಲವೂ ಹೋಯಿತು. ಹೊಸದು ಬಂದಿತು. ನಾವು ನೂತನ ಸೃಷ್ಟಿಯಾದೆವು ಮತ್ತು ಹಳೆಯದಕ್ಕೆ ನಮ್ಮಲ್ಲಿ ಯಾವುದೇ ಪಾಲಿಲ್ಲ ಮತ್ತು ನಮ್ಮ ಮೇಲೆ ಇನ್ನಾವುದೇ ಅಧಿಕಾರವಿಲ್ಲ (2 ಕೊರಿಂಥದವರಿಗೆ 5:17).

- **ಆತನ ಪುನರುತ್ಥಾನದಲ್ಲಿ ಗುರುತಿಸಿಕೊಂಡಿದ್ದೇವೆ:** ಕ್ರಿಸ್ತನು ಪುನರುತ್ಥಾನನಾದಾಗ ನಾವೂ ಸಹ ಆತನೊಂದಿಗೆ ಎಬ್ಬಿಸಲ್ಪಟ್ಟೆವು (ಎಫೆಸದವರಿಗೆ 2:5). ಅಂದರೆ ನಾವು ಮರಣದಿಂದ ಜೀವಕ್ಕೂ, ಸೈತಾನನ ಶಕ್ತಿಯಿಂದ ಬಿಡಿಸಲ್ಪಟ್ಟು ದೇವರ ಬಳಿಗೂ ತರಲ್ಪಟ್ಟೆವು (ಕೊಲೊಸ್ಸೆಯವರಿಗೆ 1:13). ಈಗ ನಾವು ದೇವರ ರಾಜ್ಯದಲ್ಲಿ ಹೊಸ ಜೀವನದೊಂದಿಗೆ ನಡೆಯುತ್ತಿದ್ದೇವೆ. ನಮಗೆ ಜೀವಿಸುವ ಹೊಸ ಮಾರ್ಗವಿದೆ. ಅಂಧಕಾರದ ಶಕ್ತಿಗಳಿಗೆ ನಮ್ಮ ಮೇಲೆ ಹಿಡಿತವಿಲ್ಲ.
- **ಆತನ ಎತ್ತಲ್ಪಡುವಿಕೆಯಲ್ಲಿ ಗುರುತಿಸಿಕೊಂಡೆವು:** ಕ್ರಿಸ್ತನು ಮೇಲಕ್ಕೆ ಎತ್ತಲ್ಪಟ್ಟಾಗ, ನಾವೂ ಸಹ ಆತನೊಂದಿಗೆ ಎತ್ತಲ್ಪಟ್ಟೆವು (ಎಫೆಸದವರಿಗೆ 2:6; ಕೊಲೊಸ್ಸೆಯವರಿಗೆ 3:1–3). ಆದದರಿಂದ ನಾವು ನಮ್ಮ ಬಯಕೆಗಳನ್ನು ಮೇಲಿರುವ ಸಂಗತಿಗಳೊಂದಿಗೆ ಇರಿಸಬೇಕಾಗಿದೆ. ನಾವು ನಮ್ಮ ಜೀವನವನ್ನು ಪರಲೋಕದ ದೃಷ್ಟಿಕೋನದಿಂದ ನೋಡುವ ಹಾಗೆ ನೂತನ ಮನಸ್ಸನ್ನು ಹೊಂದಿದವರಾಗಿ ಜೀವಿಸುತ್ತೇವೆ. ನಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಡಲ್ಪಟ್ಟಿದೆ.
- **ಆತನ ಆಸನಾರೂಢನಾಗಿರುವುದರಲ್ಲಿ ಗುರುತಿಸಿಕೊಂಡಿದ್ದೇವೆ:** ಕ್ರಿಸ್ತನು ತಂದೆಯ ಬಲಗಡೆಯಲ್ಲಿ ತನ್ನ ಸಿಂಹಾಸನದಲ್ಲಿ ಆಸನಾರೂಢನಾದಾಗ ನಾವೂ ಸಹ ಆತನೊಂದಿಗೆ ಆಸನಾರೂಢರಾಗಿ ಮಾಡಲ್ಪಟ್ಟೆವು (ಎಫೆಸದವರಿಗೆ 2:6). ನಾವು ಸೈತಾನನು ಮತ್ತು ಅವನ ದುರಾತ್ಮ ಸೈನ್ಯಗಳೆಲ್ಲಾ ನಮ್ಮ ಪಾದಗಳ ಕೆಳಗೆ ಹಾಕಲ್ಪಡುವಂತೆ ಯೇಸುಕ್ರಿಸ್ತನಲ್ಲಿರುವ ಆಳ್ವಿಕೆ ಮತ್ತು ಅಧಿಕಾರವುಳ್ಳ ಸ್ಥಳದಲ್ಲಿ ಆಸನಾರೂಢರಾಗಿಸಲ್ಪಟ್ಟೆವು.

ನೀರಿನ ದೀಕ್ಷಾಸ್ನಾನವು ಇವೆಲ್ಲವುಗಳನ್ನು ತೋರ್ಪಡಿಸಿಕೊಳ್ಳುವಂತಹ ಒಂದು ಸೂಚನೆ (ಚಿಹ್ನೆ) ಯಾಗಿದೆ. ನೀನು ನೀರಿನೊಳಗೆ ಹೋದಾಗ (ಮುಳುಗಿದಾಗ) ಇದು ನನ್ನ ಮರಣ (ಶಿಲುಬೆಗೆ ಹಾಕಲ್ಪಡು) ವನ್ನು ಮತ್ತು ಕ್ರಿಸ್ತನೊಂದಿಗೆ ಹೂಣಲ್ಪಡುವುದನ್ನು ಸೂಚಿಸುತ್ತದೆ. ನೀನು ನೀರಿನಿಂದ ಮೇಲಕ್ಕೆ ಬರುವುದು ನಿನ್ನ ಪುನರುತ್ಥಾನ, ಎತ್ತಲ್ಪಡುವಿಕೆ ಮತ್ತು ಯೇಸುಕ್ರಿಸ್ತನೊಂದಿಗೆ ಆಸನಾರೂಢನಾಗುವುದೇ ಆಗಿದೆ.

**ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ನೀನು ಯೇಸುಕ್ರಿಸ್ತನೊಂದಿಗೆ ಮರಣ, ಹೂಣಲ್ಪಡುವಿಕೆ, ಪುನರುತ್ಥಾನ ಮತ್ತು ಆಸನಾರೂಢನಾಗುವುದರ ಕುರಿತು ದೃಶ್ಯ ಮತ್ತು ಅದೃಶ್ಯವಾದ ಲೋಕಕ್ಕೆ ಆತ್ಮೀಕ ರೀತಿಯಲ್ಲಿ ಗುರುತಿಸಿಕೊಳ್ಳುತ್ತಾ ಅದನ್ನು**

**ಘೋಷಿಸುವವನಾಗಿರುತ್ತೀ. ಇದು ಬಹು ಶಕ್ತಿಯುತವಾಗಿದೆ ಮತ್ತು ಕ್ರಿಯೆಯಲ್ಲಿ ತೋರ್ಪಡಿಸುವ ಒಂದು ಚಿಹ್ನೆಯಾಗಿದೆ. ನೀರಿನ ದೀಕ್ಷಾಸ್ನಾನದ ಸಂದರ್ಭದಲ್ಲಿ, ಪವಿತ್ರಾತ್ಮನ ಕಾರ್ಯದ ಮೂಲಕ ಕ್ರಿಸ್ತನ ಶಿಲುಬೆಯ ಶಕ್ತಿಯು ನಿನ್ನೊಳಗೆ ಪ್ರವೇಶಿಸುವುದನ್ನೂ ಸಹ ನಿರೀಕ್ಷಿಸುವವನಾಗಿರುತ್ತೀ.** ಜೀವನದ ಯಾವುದಾದರೂ ಹಳೆಯ ಸಂಗತಿಗಳು (ಪಾಪ, ದುರಾಭ್ಯಾಸ, ಅವಮಾನ, ಮಾನಸಿಕ ಆಘಾತ ಇತ್ಯಾದಿ) ನಿನ್ನನ್ನು ಬಾಧಿಸುವ ಮತ್ತು ಭಯಪಡಿಸುವಂತಹ ಹಿಡಿತ ಒಂದು ವೇಳೆ ನಿನ್ನ ಮೇಲಿರುವುದಾದರೆ, ಅವುಗಳಿಗೆ ಮತ್ತು ನಿನ್ನ ಮೇಲಿರುವ ಅದರ ಶಕ್ತಿಯು ಮುರಿಯಲ್ಪಡುವುದಕ್ಕಾಗಿ ಧೈರ್ಯದಿಂದ ನುಡಿಯಬೇಕಾಗಿದೆ. ನಿನ್ನ ಹಳೆಯ ಜೀವಿತದಲ್ಲಿರುವ ಯಾವುದಾದರೂ ಮತ್ತು ಎಲ್ಲಾ ಕಾರ್ಯಗಳನ್ನು ಮುರಿಯುವುದಕ್ಕೆ ಕಾರಣವಾದವುಗಳನ್ನು ನೀರಿನ ದೀಕ್ಷಾಸ್ನಾನದಲ್ಲಿ ನೀನು ಪ್ರಚುರ ಪಡಿಸುವುದಕ್ಕಾಗಿ ನಿರೀಕ್ಷಿಸಬೇಕಾಗಿದೆ.

ಅಪೊಸ್ತಲನಾದ ಪೌಲನು ಹೇಳಿರುವದೇನೆಂದರೆ–ಆದದರಿಂದ ನಾವು ''ಕ್ರಿಸ್ತನನ್ನು ಧರಿಸಿಕೊಂಡಿದ್ದೇವೆ.''

**ಗಲಾತ್ಯದವರಿಗೆ 3:27**
**ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ.**

ಜನರು ನಮ್ಮನ್ನು ನೋಡುವಾಗ ನಾವು ಯೇಸುವಿನೊಂದಿಗೆ ಒಂದಾಗಿರುವದನ್ನು ಮತ್ತು ಯೇಸುವನ್ನೇ ನೋಡಬೇಕು. ನಾವು ಆತನೊಂದಿಗೆ ಧರಿಸಿಕೊಳ್ಳಲ್ಪಟ್ಟಿದ್ದೇವೆ. ನಾವು ಯೇಸುಕ್ರಿಸ್ತನನ್ನು ಧರಿಸಿಕೊಂಡಿರುವುದರಿಂದ, ಜನರು ನಮ್ಮಲ್ಲಿ ಕ್ರಿಸ್ತನನ್ನು ಕಾಣುವಂತೆ ಪವಿತ್ರಾತ್ಮನು ನಮ್ಮನ್ನು ದಿನದಿಂದ ದಿನಕ್ಕೆ ನಾವು ಆತನ ಸಾರೂಪ್ಯವಾಗುತ್ತಾ ಮುಂದುವರೆಯುವಂತೆಯೂ ರೂಪಾಂತರಗೊಳಿಸುತ್ತಾನೆ.

## ಪ್ರತಿಬಿಂಬಿಸುವಿಕೆ

ನೀವು ಆತ್ಮೀಕ ರೀತಿಯಲ್ಲಿ ಯೇಸುಕ್ರಿಸ್ತನೊಂದಿಗೆ ಗುರುತಿಸಲ್ಪಟ್ಟಿರುವಿರಿ

1) ಆತನ ಮರಣ (ಶಿಲುಬೆಗೆ ಹಾಕಲ್ಪಡುವುದು) (ರೋಮಾಪುರದವರಿಗೆ 6:6).

2) ಆತನ ಹೂಣಲ್ಪಡುವಿಕೆ (ರೋಮಾಪುರದವರಿಗೆ 6:4).

3) ಆತನ ಪುನರುತ್ಥಾನ (ಎಫೆಸದವರಿಗೆ 2:5).

4) ಆತನ ಎತ್ತಲ್ಪಡುವಿಕೆ (ಎಫೆಸದವರಿಗೆ 2:6).

5) ಆತನ ಆಸನಾರೂಢನಾಗುವಿಕೆ (ಎಫೆಸದವರಿಗೆ 2:6).

ಈ ಅಧ್ಯಾಯದಲ್ಲಿ ಹೇಳಲ್ಪಟ್ಟಿರುವ ಈ ಮೂಲಗಳನ್ನೂ, ಈ ಐದು ಮುಖ್ಯ ಅಂಶಗಳ ಅರ್ಥಗಳನ್ನು ವೈಯಕ್ತಿಕವಾಗಿ ನೀವು ಪ್ರತಿಬಿಂಬಿಸಿರಿ.

# 6
# ಒಂದು ಒಳ್ಳೇ ಮನಸ್ಸಾಕ್ಷಿಯ (ಆತ್ಮಸಾಕ್ಷಿಯ) ಪ್ರತಿಕ್ರಿಯೆ

''ನೋಹನ ನಾವೆ''ಯ ಮುಖಾಂತರ ಜಲಪ್ರಳಯದಿಂದ ಆ ಎಂಟು ಜನರು ರಕ್ಷಣೆ ಹೊಂದಿದ್ದರ ಕುರಿತು ಅಪೊಸ್ತಲನಾದ ಪೇತ್ರನು ವಿವರಿಸುತ್ತಾನೆ. ಆನಂತರದಲ್ಲಿ ಇದು ನೀರಿನ ದೀಕ್ಷಾಸ್ನಾನಕ್ಕೆ ಗುರುತಾಯಿತು ಎಂಬುದನ್ನು ಸಹ ತೋರಿಸುತ್ತಾನೆ. ಅದು ಹೇಗೆಂದರೆ, ಮರಣದಿಂದ ಎಬ್ಬಿಸಲ್ಪಟ್ಟು ಉನ್ನತವಾದ ಪರಲೋಕದಲ್ಲಿ ಆಸನಾರೂಢನಾಗಿರುವ ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವುದರ ಮೂಲಕ ನಾವೂ ಸಹ ರಕ್ಷಣೆಯನ್ನು ಅನುಭವಿಸಿದವರಾಗಿದ್ದೇವೆ.

**1 ಪೇತ್ರನು 3:20-22**

**[20] ಅಂದರೆ ಪೂರ್ವಕಾಲದಲ್ಲಿ ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ ಬಳಿಗೆ ಹೋಗಿ ಸುವಾರ್ತೆಯನ್ನು ಸಾರಿದನು. ಆ ನಾವೆಯೊಳಗೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆ ಹೊಂದಿದರು.**

**[21] ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈ ಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ.**

**[22] ಆತನು ಪರಲೋಕಕ್ಕೆ ಹೋಗಿ ದೇವರ ಬಳಿಯಲ್ಲಿದ್ದಾನೆ; ದೇವದೂತರೂ ಅಧಿಕಾರಿಗಳೂ ಮಹತ್ವಗಳೂ ಆತನ ಸ್ವಾಧೀನವಾಗಿವೆ.**

ಪೇತ್ರನು ನೀರಿನ ದೀಕ್ಷಾಸ್ನಾನವನ್ನು ಕುರಿತು ಸೂಚಿಸುವಾಗ, ದೀಕ್ಷಾಸ್ನಾನವು ನಮ್ಮ ದೇಹದ ಹೊರಭಾಗವನ್ನು ಮಾತ್ರ ಶುಚಿಮಾಡುವಂತದ್ದಲ್ಲ ಬದಲಾಗಿ ನಾವು ದೇವರ ಮುಂದೆ ನೀತಿವಂತರಾಗಿ ನಡೆದುಕೊಳ್ಳುವಂತೆ ನಮ್ಮ ಮನಸ್ಸಾಕ್ಷಿಯನ್ನೂ ಸಹ ಶುಚಿಮಾಡುವಂತದ್ದಾಗಿದೆ. ಇದು ಕರ್ತನಾದ ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದಲ್ಲಿ ನಂಬಿಕೆ ಇಡುವುದರ ಮೂಲಕವೇ ಉಂಟಾಗಿರುವುದಾಗಿದೆ.

ನಾವು ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟಾಗ, ಆತನ ರಕ್ತವು ನಮ್ಮನ್ನು ಶುದ್ಧಿ ಮಾಡಿತು ಮತ್ತು ನಮ್ಮ ಪಾಪಗಳನ್ನು ಇನ್ನೂ ಶುದ್ಧಿ ಮಾಡುತ್ತಲೇ ಇರುತ್ತದೆ. ನಾವು ದೇವರಿಗಾಗಿ ನೀತಿವಂತರಾಗಿ ಮಾಡಲ್ಪಟ್ಟಿದ್ದೇವೆ. ನಾವು ದೇವರಿಗೆ ಪ್ರಿಯರೂ, ಆತನ ಪ್ರಸನ್ನತೆಯಲ್ಲಿ ಅಂಗೀಕರಿಸಲ್ಪಟ್ಟವರೂ ಮತ್ತು ಆತನ ದೃಷ್ಟಿಗೆ ನಿರ್ಮಲರೂ ಆಗಿದ್ದೇವೆ. ತಪ್ಪು ಹೊರಿಸುವ ಮನಸ್ಸಾಕ್ಷಿ, ಅವಮಾನ, ಅಪರಾಧ ನಿರ್ಣಯ ಅಥವಾ ದೂರು ಹೇಳುವಿಕೆ, ದೇವರೊಂದಿಗಿನ ಸಂಬಂಧದ ಮಾರ್ಗದಿಂದ ನಮ್ಮೊಳಗೆ ತಡೆಮಾಡುವ ಯಾವುದೇ ವಿಷಯಗಳು ಇನ್ನು ಇಲ್ಲವೇ ಇಲ್ಲ.. ಕೇವಲ ಯೇಸುಕ್ರಿಸ್ತನು ಮಾತ್ರವೇ ನಮ್ಮನ್ನು ದೇವರೊಂದಿಗಿನ ಅಂತಹ ಸಂಬಂಧದೊಳಗೆ ಸೇರಿಸುವಂತವನಾಗಿದ್ದಾನೆ. **ಯೇಸುಕ್ರಿಸ್ತನ ಮೂಲಕ ದೇವರ ಕಡೆಗೆ ನಿಮ್ಮ ಮನಸ್ಸಾಕ್ಷಿಯು ಒಳ್ಳೆಯದೂ ಮತ್ತು ಶುದ್ಧವೂ ಆಗಿ ಮಾಡಲ್ಪಟ್ಟಿರುವುದರಿಂದ ನೀವು ನೀರಿನ ದೀಕ್ಷಾಸ್ನಾನ ಹೊಂದಿದಿರಿ. ನೀರಿನ ದೀಕ್ಷಾಸ್ನಾನವು ಒಂದು ಒಳ್ಳೇ ಮನಸ್ಸಾಕ್ಷಿಯುಳ್ಳವರಾಗಿ ದೇವರ ಕಡೆಗಿರುವ ಪ್ರತಿಕ್ರಿಯೆ ಅಥವಾ ಒಂದು ಸದುತ್ತರವಾಗಿದೆ.**

ನಾವು ನಮ್ಮ ಪ್ರತಿನಿತ್ಯದ ಜೀವನದಲ್ಲಿ ಕ್ರಿಸ್ತನು ನಮಗಾಗಿ ಮಾಡಿ ಮುಗಿಸಿರುವ ಕಾರ್ಯಗಳಿಗಾಗಿ ಮತ್ತು ನಾವು ಆತನ ಮೇಲಿಟ್ಟಿರುವ ನಂಬಿಕೆಯ ಮುಖಾಂತರವಾಗಿ ದೇವರ ಮುಂದೆ ವಿಧೇಯರಾಗುವ ಒಳ್ಳೇ ಮನಸ್ಸಾಕ್ಷಿಯನ್ನು ಕಾಯ್ದುಕೊಳ್ಳಬೇಕಾಗಿದೆ.

**1 ಯೋಹಾನ 3:20-22**

**20 ಮತ್ತು ನಮ್ಮ ಹೃದಯವು ಯಾವ ವಿಷಯದಲ್ಲಿಯಾದರೂ ನಮ್ಮನ್ನು ದೋಷಿಗಳೆಂದು ನಿರ್ಣಯಿಸಿದರೂ ದೇವರು ನಮ್ಮ ಹೃದಯಕ್ಕಿಂತ ದೊಡ್ಡವನಾಗಿದ್ದು ಎಲ್ಲವನ್ನೂ ಬಲ್ಲವನಾಗಿದ್ದಾನೆಂದು ನಾವು ತಿಳಿದು ದೇವರ ಸಮುಕ್ಷಮದಲ್ಲಿ ನಮ್ಮ ಹೃದಯವನ್ನು ಸಮಾಧಾನಪಡಿಸುವೆವು.**

**21 ಪ್ರಿಯರೇ, ನಮ್ಮ ಹೃದಯವು ನಮ್ಮನ್ನು ದೋಷಿಗಳೆಂದು ನಿರ್ಣಯಿಸದಿದ್ದರೆ ನಮಗೆ ದೇವರ ವಿಷಯದಲ್ಲಿ ಧೈರ್ಯವುಂಟು.**

**22 ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವುದರಿಂದ ಏನು ಬೇಡಿಕೊಂಡರೂ ಆತನಿಂದ ಹೊಂದುವೆವು.**

ನಮ್ಮ ಮನಸ್ಸಾಕ್ಷಿಯು ಶುದ್ಧವಾಗಿರುವಾಗ, ನಮ್ಮ ಹೃದಯವು ನಮ್ಮನ್ನು ದೋಷಿ ಎಂದು ಹೇಳುವುದಿಲ್ಲ ಮತ್ತು ದೇವರ ಮುಂದೆ ನಾವು ನಂಬಿಕೆಯುಳ್ಳವರಾಗಿರುತ್ತೇವೆ. ಒಂದು ವೇಳೆ ನಮ್ಮ ಹೃದಯವು ನಮ್ಮನ್ನು

ದೋಷಿ ಎಂದೆಣಿಸಿದರೆ, ಅಂದರೆ ನಮ್ಮ ಮನಸಾಕ್ಷಿಯು ಸ್ಪಷ್ಟವಾಗಿಲ್ಲ ಮತ್ತು ನಮ್ಮೊಳಗೆ ದೋಷಾರೋಪಣೆ ಇದೆ ಎಂದರ್ಥ. ದೇವರಿಗೆ ಎಲ್ಲವೂ ತಿಳಿದಿದೆ. ಆದದರಿಂದ ನಾವು 1 ಯೋಹಾನ 1:9 ರಲ್ಲಿ ತಿಳಿಸಿರುವಂತೆ ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿ, ಆತನ ರಕ್ತದ ಮೂಲಕ ನಮಗೆ ತಿಳಿದೂ, ತಿಳಿಯದೆಯೋ ಮಾಡಿದ ತಪ್ಪುಗಳನ್ನು ಶುದ್ಧೀಕರಿಸುವಂತೆ ಕೇಳಿಕೊಳ್ಳಬೇಕಾಗಿದೆ (ದೇವರು ಎಲ್ಲವನ್ನೂ ತಿಳಿದವನಾಗಿದ್ದಾನೆ). ಕ್ರಿಸ್ತನಲ್ಲಿಟ್ಟ ನಂಬಿಕೆಯ ಮೂಲಕ ಶುದ್ಧ, ಸ್ಪಷ್ಟ ಮತ್ತು ಒಳ್ಳೇ ಮನಸಾಕ್ಷಿಯುಳ್ಳವರಾದಾಗ ನಾವು ದೇವರ ಮುಂದೆ ನಡೆಯುತ್ತಾ ಮುಂದುವರೆಯುವುದಕ್ಕೆ ಸಾಧ್ಯವಾಗುತ್ತದೆ. ಆತನಿಗೆ ವಿಧೇಯರಾಗುತ್ತಾ ಮುನ್ನಡೆಯುತ್ತೇವೆ, ಆತನ ದೃಷ್ಟಿಗೆ ಸರಿಯಾದದ್ದನ್ನೇ ಮಾಡುತ್ತೇವೆ. ಮತ್ತು ಒಂದು ಒಳ್ಳೇ ಮನಸಾಕ್ಷಿಯನ್ನು ದೇವರ ಮುಂದೆ ಕಾಯ್ದುಕೊಳ್ಳುವವರಾಗುತ್ತೇವೆ.

## ಪ್ರತಿಬಿಂಬಿಸುವಿಕೆ

1) ಈ ಅಧ್ಯಾಯದಲ್ಲಿ ವಿವರಿಸಲ್ಪಟ್ಟ ಪ್ರಕಾರ ದೇವರ ಕಡೆಗಿರುವ ಒಂದು ''ಒಳ್ಳೇ ಮನಸಾಕ್ಷಿ'' ಎಂದರೆ ಏನು?

2) ನೀರಿನ ದೀಕ್ಷಾಸ್ನಾನ ಹೊಂದಿದ ನಂತರವೂ ನಿಮ್ಮ ದಿನ ನಿತ್ಯದ ಜೀವನದಲ್ಲಿ ದೇವರ ಮುಂದೆ ಒಂದು ಒಳ್ಳೇ ಮನಸಾಕ್ಷಿಯನ್ನು ಹೇಗೆ ಕಾಯ್ದುಕೊಳ್ಳುವಿರಿ?

# 7
# ಕೆಲವೊಂದು ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಗಳು

ಈ ಅಧ್ಯಾಯದಲ್ಲಿ ನಾವು ಕೆಲವು ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಗಳನ್ನು ವಿವರಿಸಿ ಹೇಳಿರುತ್ತೇವೆ. ಈಗಾಗಲೇ ತಿಳಿಸಲ್ಪಟ್ಟಂತೆ ಹಿಂದಿನ ಅಧ್ಯಾಯಗಳಲ್ಲಿ ತತ್ವಶಾಸ್ತ್ರ ಮತ್ತು ವಾಕ್ಯಗಳ ಅನುಸಾರವಾಗಿ ಉತ್ತರಿಸಿದ್ದೇವೆ. ಹೀಗಿರುವುದರಿಂದ ಇದು ಇಲ್ಲಿ ಪುನರಾವರ್ತಿತವಾಗಿರುವುದಿಲ್ಲ.

**1) ದೀಕ್ಷಾಸ್ನಾನ ಹೊಂದುವದಕ್ಕೆ ಇರಬೇಕಾದ ಸರಿಯಾದ ವಯಸ್ಸು ಏನು?**

ಒಬ್ಬ ವ್ಯಕ್ತಿಯು ಯಾವ ವಯಸ್ಸಿನಲ್ಲಿ ದೀಕ್ಷಾಸ್ನಾನ ಹೊಂದಬೇಕೆಂದು ದೇವರ ವಾಕ್ಯದಲ್ಲಿ ಉಲ್ಲೇಖಿಸಲಾಗಿಲ್ಲ. ಆದದರಿಂದ ನಾವು ವಾಕ್ಯಾನುಸಾರವಾಗಿ ಬರೆಯಲ್ಪಟ್ಟ ಕೆಲವು ಪೂರ್ವ ಅವಶ್ಯಕತೆಗಳೊಂದಿಗೆ ಹೋಗಬೇಕಾಗಿದೆ. ಅದೇನಂದರೆ–ಒಬ್ಬ ವ್ಯಕ್ತಿಯು ಮಾನಸಾಂತರ ಹೊಂದಿ ಮತ್ತು ಕರ್ತನಾದ ಯೇಸುಕ್ರಿಸ್ತನನ್ನು ತನ್ನ ರಕ್ಷಕನೂ ಒಡೆಯನೂ ಆಗಿ ನಂಬಿದಾಗ ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದು. ಇದು ಒಂದು ಶಿಶುವಿನಿಂದ ಸಾಧ್ಯವಿಲ್ಲ. ಹೀಗಿರುವುದರಿಂದ ಶಿಶುವಿನ ದೀಕ್ಷಾಸ್ನಾನವನ್ನು ಕುರಿತು ದೇವರ ವಾಕ್ಯದಲ್ಲಿ ಉಲ್ಲೇಖಿಸಲಾಗಿಲ್ಲ. ಹೇಗೆಂದರೆ, ಯೇಸುಕ್ರಿಸ್ತನ ಸುವಾರ್ತೆಯ ಅರ್ಥ ಮತ್ತು ಅದರ ಸಂದೇಶವನ್ನು ಅರ್ಥಮಾಡಿಕೊಂಡು, ವೈಯಕ್ತಿಕವಾಗಿ ಪಶ್ಚಾತ್ತಾಪ (ಮಾನಸಾಂತರ) ಪಟ್ಟು ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟು ನೀರಿನ ದೀಕ್ಷಾಸ್ನಾನವನ್ನು ಹೊಂದಲು ಸಿದ್ಧರಾಗಿರುವ ಯಾವುದೇ ವ್ಯಕ್ತಿಯಾಗಲಿ (ಅವನಾಗಲೀ ಅಥವಾ ಅವಳಾಗಲೀ) ವಯಸ್ಸಿನ ನಿರ್ಬಂಧವಿಲ್ಲದೆ ನೀರಿನ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಬಹುದಾಗಿದೆ.

**2) ರಕ್ಷಣೆ ಹೊಂದಿದ ದಿನದಿಂದ–ದೀಕ್ಷಾಸ್ನಾನ ತೆಗೆದುಕೊಳ್ಳುವದಕ್ಕೆ ಒಬ್ಬ ವಿಶ್ವಾಸಿಗೆ ಕಾಯುವುದಕ್ಕೆ ಅವಧಿ ಇರುತ್ತದೋ?**

ಕಾಯುವ ಅವಧಿಯ ಅವಶ್ಯಕತೆ ಇರುವುದಿಲ್ಲ. ಜನರು ತಮ್ಮನ್ನು ತಾವು ಒಪ್ಪಿಸಿಕೊಡುವುದಕ್ಕೆ ತೀರ್ಮಾನಿಸಿ ಮಾನಸಾಂತರ ಹೊಂದಿ ಕರ್ತನಾದ ಯೇಸುಕ್ರಿಸ್ತನ ಮೇಲೆ ನಂಬಿಕೆ ಇಟ್ಟ ಕೂಡಲೇ ನೀರಿನಲ್ಲಿ ದೀಕ್ಷಾಸ್ನಾನ

ಹೊಂದುತ್ತಿದ್ದ ಎಲ್ಲಾ ಸಂದರ್ಭಗಳು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಮಗಾಗಿ ದಾಖಲಾಗಿರುವುದು ಕಂಡು ಬರುತ್ತದೆ.

**3) ನಾವು ಉಪಯೋಗಿಸುವ ''ದೀಕ್ಷಾಸ್ನಾನದ ಸೂತ್ರ'' ಏನಾಗಿದೆ?**

ಅಪೊಸ್ತಲರ ಕೃತ್ಯಗಳಲ್ಲಿ ಅಭ್ಯಾಸಿಸಿದ ಹಾಗೆ–ಯೇಸುಕ್ರಿಸ್ತನಿಂದ ನಮಗೆ ಕೊಡಲ್ಪಟ್ಟ ಮಹಾ ಆಜ್ಞೆಯ ಮೇರೆಗೆ ನಾವು: ''ಯೇಸುವಿನ ಹೆಸರನ್ನು ಹೇಳಿ, ನಾನು ನಿನಗೆ ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುತ್ತೇನೆ'' ಎಂದು ಉಪಯೋಗಿಸುತ್ತೇವೆ.

**4) ಮತ್ತೊಬ್ಬ ವಿಶ್ವಾಸಿಗೆ ದೀಕ್ಷಾಸ್ನಾನ ಕೊಡುವ ಅಧಿಕಾರ ಯಾರಿಗೆ ಇರುತ್ತದೆ?**

ನೀರಿನ ದೀಕ್ಷಾಸ್ನಾನವನ್ನು ಹೊಂದಿದ ಯಾವುದೇ ಶಿಷ್ಯನಾಗಲೀ, ಯೇಸುಕ್ರಿಸ್ತನನ್ನು ಹಿಂಬಾಲಿಸುವುದಕ್ಕೆ ತೀರ್ಮಾನಿಸಿರುವ ಮತ್ತೊಂದು ವ್ಯಕ್ತಿಗೆ ನೀರಿನ ದೀಕ್ಷಾಸ್ನಾನವನ್ನು ಕೊಡಬಹುದಾಗಿದೆ.

**5) ನಾನು ಪುನಃ ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದೇ?**

ಶಿಶುವಿಗೆ ನೀರನ್ನು ಚಿಮುಕಿಸುವ ಮೂಲಕ ಕೊಡುವ ಪದ್ಧತಿಯು, ಹೊಸ ಒಡಂಬಡಿಕೆಯಲ್ಲಿ ಸತ್ಯವೇದಕ್ಕೆ ಅನುಸಾರವಾಗಿ ಕೊಡುವಂತ ನೀರಿನ ದೀಕ್ಷಾಸ್ನಾನವಲ್ಲ, ಇದನ್ನು ನೀರಿನ ದೀಕ್ಷಾಸ್ನಾನವೆಂದು ಒಪ್ಪಿಕೊಳ್ಳಲು ಆಗುವುದಿಲ್ಲ. ಹೀಗಿರಲಾಗಿ ಒಬ್ಬ ವ್ಯಕ್ತಿಯು, ಚಿಕ್ಕ ಮಗುವಿದ್ದಾಗ ನೀರನ್ನು ಚಿಮುಕಿಸಿ ತೆಗೆದುಕೊಂಡಿದ್ದರೆ, ಅವನು ನೀರಿನ ದೀಕ್ಷಾಸ್ನಾನವನ್ನು ತಿರುಗಿ ಪಡೆಯಬಹುದು. ಇದು ಯೇಸುಕ್ರಿಸ್ತನನ್ನು ವೈಯಕ್ತಿಕವಾಗಿ ಆತನನ್ನು ರಕ್ಷಕನೂ, ಒಡೆಯನೂ ಎಂದು ಅಂಗೀಕರಿಸಿದ ನಂತರವೇ ತೆಗೆದುಕೊಳ್ಳಬಹುದಾಗಿದೆ.

ಇನ್ನೂ ಕೆಲವರಿಗೆ, ಅವರ ಪೋಷಕರು ಮತ್ತು ಸ್ನೇಹಿತರ ಒತ್ತಾಯಕ್ಕೆ (ಪ್ರೋತ್ಸಾಹಕ್ಕೆ) ಒಳಪಟ್ಟು ನೀರಿನ ದೀಕ್ಷಾಸ್ನಾನವನ್ನು ಅವರು ಸಾಂಪ್ರದಾಯಿಕವಾಗಿ ತೆಗೆದುಕೊಂಡು, ಕ್ರಿಸ್ತನಲ್ಲಿ ನಂಬಿಕೆಯಿಡುವುದರಿಂದ ಉಂಟಾಗುವ ರಕ್ಷಣೆಯನ್ನು ಯಥಾರ್ಥವಾಗಿ ಅನುಭವಿಸದೆ ಇರುವ ಸಂದರ್ಭದಲ್ಲಿ,–ಅಂಥವರಿಗೆ ಯೇಸುಕ್ರಿಸ್ತನ ಹೆಸರಿನಲ್ಲಿ ನಂಬಿಕೆಯಿಟ್ಟು ನೀರಿನ ದೀಕ್ಷಾಸ್ನಾನ ಹೊಂದುವದಕ್ಕಾಗಿ ಪ್ರೋತ್ಸಾಹಿಸುತ್ತೇವೆ.

ಇನ್ನೂ ಕೆಲವು ಸಂದರ್ಭಗಳಲ್ಲಿ ಜನರು ತಮ್ಮ ವಿಶ್ವಾಸ ಮತ್ತು ದೇವರೊಂದಿಗೆ ನಡೆಯುವ ಕ್ರಿಯೆಯಿಂದ ದೂರ ಸರಿದಂತೆ, ಅನಿಸಿದಾಗ ಮತ್ತು ತಮ್ಮ ಹೃದಯಗಳಲ್ಲಿ ನಿಶ್ಚಯಿಸಿಕೊಂಡು ಕರ್ತನ ಕಡೆಗೆ ಪುನ: ಹಿಂದಿರುಗುವುದರ ಗುರುತಾಗಿ ಅವರು ಮರು ದೀಕ್ಷಾಸ್ನಾನ ತೆಗೆದುಕೊಳ್ಳಬಹುದಾಗಿದೆ. ಇದು ಅವರ ಸ್ವಂತ (ವೈಯಕ್ತಿಕ) ವಾಗಿ ಆಯ್ಕೆ ಮಾಡಿಕೊಂಡಂತೆ ಅವರನ್ನು ಸ್ವಾಗತಿಸುತ್ತೇವೆ.

**6) ರಕ್ಷಣೆ ಹೊಂದುವದಕ್ಕಾಗಿ ನೀರಿನ ದೀಕ್ಷಾಸ್ನಾನ ಅತ್ಯಾವಶ್ಯಕವಾಗಿದೆಯೋ ಅಥವಾ ಇದು ಒಂದು ರಕ್ಷಣೆ ಹೊಂದಿರುವುದರ ಗುರುತಾಗಿದೆಯೋ?**

ಕ್ರಿಸ್ತನಲ್ಲಿಟ್ಟ ನಂಬಿಕೆಯ ಮೂಲಕ ಸಂಪೂರ್ಣವಾದ ಕೃಪೆಯಿಂದಲೇ ರಕ್ಷಣೆಯು ಉಂಟಾಗುತ್ತದೆ. ರಕ್ಷಣೆ ಹೊಂದಿರುವುದನ್ನು ತೋರ್ಪಡಿಸಿಕೊಳ್ಳುವುದೇ ನೀರಿನ ದೀಕ್ಷಾಸ್ನಾನವಾಗಿದೆ. ಆದರೂ ಸಹ ಯೇಸು ತನ್ನ ಭೂಲೋಕದ ಸೇವೆಯ ಸಮಯದಲ್ಲಿ ಯೇಸುವನ್ನು ಹಿಂಬಾಲಿಸುವವರೆಲ್ಲರಿಗೂ (ಆತನ ಶಿಷ್ಯರು) ದೀಕ್ಷಾಸ್ನಾನ ಮಾಡಿಸುತ್ತಿದ್ದರು. ಕರ್ತನು ಶಿಲುಬೆಯ ಮೇಲಿದ್ದ ಕಳ್ಳನಿಗೆ ಪರದೈಸನ್ನು ವಾಗ್ದಾನ ಮಾಡಿ, ಅವನನ್ನು ರಕ್ಷಣೆಗೆ ನಡೆಸಿದನು. ಆ ಕಳ್ಳನಿಗೆ ಶಿಲುಬೆಯ ಮೇಲೆ ದೀಕ್ಷಾಸ್ನಾನ ಹೊಂದುವದಕ್ಕೆ ಯಾವ ಅವಕಾಶವೂ ಸಿಗಲಿಲ್ಲ. ಅದೇ ರೀತಿಯಾಗಿ ಅನೇಕರು ಈ ಲೋಕದ ಯಾತ್ರೆಯನ್ನು ಮುಗಿಸುವ ಕಡೆಯ ಸಂದರ್ಭಗಳಲ್ಲಿ ಯೇಸುಕ್ರಿಸ್ತನ ಮೇಲೆ ನಂಬಿಕೆ ಇಡಲು ತೀರ್ಮಾನ ತೆಗೆದುಕೊಳ್ಳುವರು ಮತ್ತು ಅವರಿಗೂ ಸಹ ದೀಕ್ಷಾಸ್ನಾನ ತೆಗೆದುಕೊಳ್ಳುವುದಕ್ಕೆ ಯಾವ ಅವಕಾಶಗಳು ಸಹ ಸಿಗದಿದ್ದಾಗ ಕ್ರಿಸ್ತನಲ್ಲಿ ವಿಶ್ವಾಸವಿಡುವುದರ ಮೂಲಕವೇ ರಕ್ಷಣೆ ಹೊಂದುವರು. ನೀರಿನ ದೀಕ್ಷಾಸ್ನಾನವು ವಿಧೇಯತೆಯನ್ನು ಸೂಚಿಸುವ ವಿಷಯವಾಗಿರುವುದರಿಂದ ರಕ್ಷಣೆ ಹೊಂದಿರುವ ನಾವೆಲ್ಲರೂ ಅದನ್ನು ನಂಬಿಗಸ್ತರಾಗಿ ನೆರವೇರಿಸಲೇಬೇಕಾಗಿದೆ.

**7) ಮರಣ ಹೊಂದಿರುವವರಿಗಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದೋ?**

ಕೆಲವು ಜನರು 1 ಕೊರಿಂಥದವರಿಗೆ 15:29 ನ್ನು ಆಧಾರ ಮಾಡಿಕೊಂಡು—ನಾವು ಸತ್ತವರ ''ಪರವಾಗಿ'' ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದೇ ಎಂದು ಕೇಳುತ್ತಾರೆ.

**1 ಕೊರಿಂಥದವರಿಗೆ 15:29**

**ಸತ್ತವರಿಗೆ ಪುನರುತ್ಥಾನವಿಲ್ಲವಾದರೆ ಸತ್ತವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ಏನು ಮಾಡುವರು? ಸತ್ತವರು ಎದ್ದು ಬರುವದೇ ಇಲ್ಲವೆಂಬದು ನಿಜವಾಗಿದ್ದರೆ ಯಾಕೆ ಅವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಾರೆ.**

1 ಕೊರಿಂಥದವರಿಗೆ 15 ರಲ್ಲಿ ಸತ್ತವರಿಗಾಗುವ ಪುನರುತ್ಥಾನದ ವಿಷಯವಾಗಿ ಹೇಳುತ್ತಾ ಸಮಾಧಿಯ ನಂತರದಲ್ಲಿರುವ ಜೀವನದ ಸತ್ಯವನ್ನು ಅಪೊಸ್ತಲನಾದ ಪೌಲನು ಸ್ಥಾಪಿಸುತ್ತಿದ್ದಾನೆ. ಅದರಲ್ಲಿ ಅವನು–''ಅವರು'' (ನಾವಲ್ಲ) ಎಂಬ ಒಂದೇ ಹೇಳಿಕೆಯು ಸತ್ತವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಂಡವರು. ''ಅವರು ಕ್ರಿಸ್ತ ನಂಬಿಕೆಯಲ್ಲಿ ಇರುವವರಲ್ಲ ಬದಲಾಗಿ ಮೂಢ ನಂಬಿಕೆಯುಳ್ಳವರೂ, ಸಂಪ್ರದಾಯವಾಗಿ ಮಾಡಿಕೊಂಡು ಬಂದಿರುವ ದೀಕ್ಷಾಸ್ನಾನವು ಅವರ ಸಂಸ್ಕೃತಿಯಲ್ಲಿ ಸತ್ತ ನಂತರವೂ ಇದು ಪರಿಣಾಮ ಬೀರಬಹುದೆಂಬ ಊಹೆಗಳಿಂದ ನಡೆಯುವವರಾಗಿದ್ದಾರೆ. ಅವರ ಈ ಎಲ್ಲಾ ಸಂಸ್ಕೃತಿಗಳು ಅಭ್ಯಾಸಗಳು ಅವರಿಗೆ ಮರಣಾನಂತರದಲ್ಲಿ ಒಂದು ಜೀವವಿದೆ ಎಂಬ ಅವರ ನಂಬಿಕೆಯನ್ನು ಮಾತ್ರ ತೋರಿಸುತ್ತದೆ.''

ಹೊಸ ಒಡಂಬಡಿಕೆಯಲ್ಲಿ ಸತ್ತವರಿಗಾಗಿ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಬೇಕೆಂಬುದಕ್ಕೆ ತೋರಿಸುವ ಯಾವ ವಾಕ್ಯಗಳೂ ಇಲ್ಲ. ಹೀಗಿರುವುದರಿಂದ ಈ ಪ್ರಶ್ನೆಗೆ ಉತ್ತರವು ದೊಡ್ಡ ಧ್ವನಿಯಿಂದ ''ಇಲ್ಲ'' ಎಂಬುದೇ. ನಾವು ಸತ್ತವರ ಪರವಾಗಿ ದೀಕ್ಷಾಸ್ನಾನ ಕೊಡುವುದೇ ಇಲ್ಲ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ—ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ 5000 ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು,ದೇವರು, ಒಳ್ಳೆಯ ದೇವರಾಗಿದ್ದಾನೆ, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ''*** ಎಂದು ಹೇಳುತ್ತದೆ **(ರೋಮಾಪುರದವರಿಗೆ 6:23)**. ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು,

ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''*ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು*'' (ಅಪೊಸ್ತಲರ ಕೃತ್ಯಗಳು 10:43).**

**''*ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದು*'' (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

*ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.*

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ. ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೇನ್*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರೀಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- **ಒಂದು ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- **ಒಂದು ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸುಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವುದರಿಂದ ಸ್ಥಳೀಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅದ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರೆ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don’t Compromise Your Calling
Don’t Lose Hope
Equipping the Saints
Foundations (Track 1)
Fulfilling God’s Purpose for Your Life
Gifts of the Holy Spirit
Giving Birth to the Purposes of God
God Is a Good God
God’s Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don’t Take Them
Open Heavens
Our Redemption
Receiving God’s Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father’s Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner’s Fire
The Spirit of Wisdom, Revelation and Power
The Wonderful Benefits of Speaking in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು ಪಿ.ಡಿ.ಎಫ್ ನಲ್ಲಿ, ಆಡಿಯೋ ಮತ್ತು ಇತರೆ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ.ಇವುಗಳಲ್ಲಿ ಅನೇಕ ಪುಸ್ತಕಗಳು ಇತರೆ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ, ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರೆ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್(ಸಲಹೆ)

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ್ ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರಿಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವುದಾಗಿದೆ.

**ಹದಿಹರೆಯದವರು**

**ವೈಯಕ್ತಿಕ ಹೊಂದಾಣಿಕೆಗಳು**

**ಸಂಬಂಧಿತ ಸವಾಲುಗಳು**

**ಶೈಕ್ಷಣಿಕ ಕಡಿಮೆ ಸಾಧನೆ**

**ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳು**

**ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**

**ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**

**ವರ್ತನೆಯ ಅಸ್ತವ್ಯಸ್ತತೆಗಳು**

**ವ್ಯಕ್ತಿತ್ವ ಅಸ್ತವ್ಯಸ್ತತೆಗಳು**

**ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**

**ಒತ್ತಡ / ಆಘಾತ**

**ಮಧುಪಾನ/ ಮಾದಕ ವಸ್ತು ದುರುಪಯೋಗ**

**ಆತ್ಮೀಕ ಸಮಸ್ಯೆಗಳು**

**ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ್ ಸೇವೆಗಳಿಗೆ ಶುಲ್ಕಗಳು ಕೈಗೆಟುಕುವ ಮತ್ತು ಪಡೆದುಕೊಳ್ಳ ಬಹುದಾದುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ**: +91-80-25452617 ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೇಲ್: counselorchrysalislife.org**

ಕ್ರಿಸಾಲಿಸ್ ಸಲಹಾಸೇವೆಯು ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್‌ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ ಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ ಆಲ್ ಪೀಪಲ್ಸ್ ಸಭೆ ಬೆಂಗಳೂರು ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru, 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:* **apcwo.org/give.**

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!
**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ALL PEOPLES CHURCH
Bible College
& MINISTRY TRAINING CENTRE

BÇ… ²à±Ç… aa…ì ÓñÂÊà¨ ÍÝÇ Êáñá ÓàÊÝ ñÃ¸à£ Pàí¨Â

**apcbiblecollege.org**

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC–BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ–ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೆಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (C.Th.)
- ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (D.Th.)
- ಮೂರು ವರ್ಷದ ಬ್ಯಾಚುಲರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9 ರಿಂದ ಮದ್ಯಾಹ್ನ 1ರವರೆಗೆ ಜರುಗುತ್ತದೆ.ಭಾರತದ ಕಾಲಾಮಾನ (ಸಂಘಟಿತ ಸಾರ್ವತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಛಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವೈಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಆನ್ ಲೈನ್:** ಆನ್ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವುದು.
- **ಇ–ಕಲಿಕೆ:** ಆನ್ಲೈನ್ ಪೋರ್ಟಲ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವುದು.

**ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಲು** ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂರ್ಪಕಿಸಿರಿ.

ನೀರಿನ ದೀಕ್ಷಾಸ್ನಾನವು ಯೇಸುಕ್ರಿಸ್ತನ ವಿಶ್ವಾಸಿಗಳಾಗಿ ಪ್ರಯಾಣಿಸುವ ನಮಗೆ ಒಂದು ಪ್ರಾಮುಖ್ಯವಾದ ಅನುಭವವಾಗಿದೆ. ದೀಕ್ಷಾಸ್ನಾನವು, ಯೇಸುಕ್ರಿಸ್ತನಲ್ಲಿ ನಂಬಿಕೆ ಇಡುವುದಕ್ಕೆ ಹಾಗೂ ಆತನನ್ನು ಹಿಂಬಾಲಿಸುವದಕ್ಕೆ ಮುಖ್ಯವಾದ ಹೆಜ್ಜೆ ಇಡುವ ವಿಷಯವಾಗಿ ಒಂದು ಸಂದರ್ಭದಲ್ಲಿ ನಾವು ತೆಗೆದುಕೊಂಡ ಒಂದು ತೀರ್ಮಾನವಾಗಿದೆ. ಆತನನ್ನು ಹಿಂಬಾಲಿಸುವದಕ್ಕೆ ಆಯ್ಕೆ ಮಾಡಿಕೊಂಡ ಪ್ರತಿಯೊಬ್ಬರಿಗೂ ಯೇಸುಕ್ರಿಸ್ತನು ಕೊಟ್ಟ ಒಂದು ಆಜ್ಞೆ ಇದಾಗಿದೆ ಮತ್ತು ಈಗಿನಿಂದ ಅದನ್ನು ಕೈಕೊಳ್ಳಬೇಕಾಗಿದೆ. ನೀವು ದೀಕ್ಷಾಸ್ನಾನಕ್ಕೆ ಸಿದ್ಧರಾಗುವಂತೆ ದೇವರ ವಾಕ್ಯದ ಮೂಲಕ ನೀರಿನ ದೀಕ್ಷಾಸ್ನಾನವನ್ನು ಸೂಚಿಸುವ ಹಾಗೂ ಅದರ ಅರ್ಥವನ್ನು ತಿಳಿದುಕೊಳ್ಳುವದಕ್ಕೆ ಸಹಾಯವಾಗುವಂತೆ ಇದು ಒಂದು ಸರಳವಾದ ಅಧ್ಯಯನವಾಗಿದೆ.

ನೀರಿನ ದೀಕ್ಷಾಸ್ನಾನದ ವಿಷಯವಾದ ಕಾರ್ಯ ವಿಶೇಷತೆಯ ಕುರಿತಾದ ಆರು ಸತ್ಯಾಂಶಗಳನ್ನು ನಾವು ಇಲ್ಲಿ ವಿವರಿಸಿದ್ದೇವೆ:

1) ಮಾನಸಾಂತರದ ಒಂದು ಗುರುತು
2) ಸಕಲ ನೀತಿವಂತಿಕೆಯನ್ನು ನೆರವೇರಿಸುವುದು
3) ನೀವು ಆತನ ಶಿಷ್ಯರೆಂಬುದಕ್ಕೆ ಒಂದು ಸಾಕ್ಷಿ
4) ಯೇಸುಕ್ರಿಸ್ತನಲ್ಲಿರುವ ನಿಮ್ಮ ನಂಬಿಕೆಯ ಒಂದು ಸಾಕ್ಷಿ
5) ಯೇಸುವಿನೊಂದಿಗೆ ನಿಮ್ಮನ್ನು ಗುರುತಿಸಿಕೊಳ್ಳುವ ಒಂದು ಘೋಷಣೆ
6) ಒಂದು ಒಳ್ಳೇ ಆತ್ಮಸಾಕ್ಷಿಯ ಪ್ರತಿಕ್ರಿಯೆ

ದೀಕ್ಷಾಸ್ನಾನಕ್ಕೆ ಸಂಬಂಧಿಸಿದಂತೆ ಜನರು ಸಾಧಾರಣವಾಗಿ ಕೇಳಬಹುದಾದ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಸಹ ನಾವು ನೀಡಿದ್ದೇವೆ.

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org